ವಾಸನಿ

ಡಿಸೆಂಬರ್ : 2001

ತಿಂಗಳ ಪತ್ರಿಕೆ

- ಜಾಗತೀಕರಣ ಹಾಗೂ ಏಷಿಯಾದ ಮಹಿಳೆಯರ ಸ್ಥಿತಿಗತಿ
- ಇಸ್ರೇಲ್ ಮಹಿಳೆಯರ ಕುರಿತು ಒಂದು ಚಿತ್ರಣ
- ಬಮಿಯಾನ್ ಬುದ್ಧ ಮತ್ತು ಅಫ್ಘಾನ್ ಯುದ್ಧ
- ಅಮ್ಮ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 20 ಸಂಚಿಕೆ : 12

ಡಿಸೆಂಬರ್ : 2001

ವಿಳಾಸ
"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067
ಇ-ಮೈಲ್ : manasapathrike@yahoo.co.in

ಸೂಚನೆ : ಬಿಡಿ ಪ್ರತಿ **5-00** ರೂ.
ವಾರ್ಷಿಕ ಚಂದಾ **50-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067



ಸಂಪಾದಕೀಯ

60-70ರ ದಶಕದ ಪ್ರಾರಂಭದಲ್ಲಿ ಹಾಗೂ ಅಂತ್ಯದವರೆಗೆ ಸಮಾಜವಾದ, ಸಮತಾವಾದದ ಕಲ್ಪನೆಗಳು ಒಂದು ಹಂತದಲ್ಲಿ ಪ್ರಗತಿಪರ ಯೋಜನೆಗಳನ್ನು ಎಲ್ಲಾ ವಲಯಗಳಲ್ಲಿಯೂ ಹುಟ್ಟುಹಾಕಿದ್ದವು. ಶೋಷಿತ ಜನಾಂಗದವರಿಗೆ ಧ್ವನಿ ನೀಡಬೇಕೆಂಬ ಹಂತದಲ್ಲಿ ದಲಿತರು, ಮಹಿಳೆಯರು, ಕಾರ್ಮಿಕರು ಹಾಗೂ ಇತರರಿಗೆ ಸಂಬಂಧಪಟ್ಟಂತೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸುವಂತಹ ಒತ್ತಡಗಳನ್ನು ಸರ್ಕಾರ ಹೊಂದಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಉದಾರೀಕರಣದ ಪ್ರಭಾವದಿಂದಾಗಿ ಈ ಎಲ್ಲ ಒತ್ತಡಗಳೂ ಬಂಡವಾಳಶಾಹಿಗಳ 'ಕಟ್ ಥ್ರೋಟ್ ಕಾಂಪಿಟೇಶನ್'ನಲ್ಲಿ ಕಡಿಮೆಯಾಗಿ 'ಹಣ' ಮಾತ್ರ ಮುಖ್ಯ ಕಾಳಜಿಯಾಗತೊಡಗಿದೆ.

ಹೀಗೆ ಬಂಡವಾಳಶಾಹಿಯ ಮುಖಗಳು ಹೆಚ್ಚು ಹೆಚ್ಚಾಗಿ ಸ್ಪಷ್ಟವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಉದಾರೀಕರಣ ತನ್ನ ಛಾಯೆಯನ್ನು ಬಲವಾಗಿ ಮೂಡಿಸತೊಡಗಿದೆ. ಗ್ರಾಹಕ ಪ್ರವೃತ್ತಿಯನ್ನು ಬಲಪಡಿಸುವ ಸರಕು ಸಂಸ್ಕೃತಿ ಸಮಾಜವಾದ ಹುಟ್ಟುಹಾಕಿದ ಸಮಾನತೆಯ ಕಲ್ಪನೆಯನ್ನು ಅಳಿಸಿಹಾಕತೊಡಗಿದೆ. ಖಾಸಗಿ ಸಂಸ್ಥೆಗಳು-ಮಹಿಳೆಯರನ್ನು ಸಶಕ್ತವಾಗಿ ಕೆಲಸಕ್ಕೆ ತೊಡಗಿಸಲು ಬೇಕಾದ ಕ್ರೆಶ್, ಮುಂತಾದ ಸಮಸ್ಯೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದೇ ಇಲ್ಲ. ಬದಲಿಗೆ ಮಹಿಳೆಯರು ಹೆಚ್ಚು ಸ್ಪರ್ಧಾತ್ಮಕವಾಗಿರಬೇಕೆಂದೇ 'ಆಯ್ಕೆ'ಯನ್ನು ನೀಡುತ್ತದೆ. ಕಡಿಮೆ ದರ್ಜೆಯ ಕೆಲಸ, ಕೆಲಸದಿಂದ ತೆಗೆದುಹಾಕುವುದು. ಮದುವೆಯಾದರೆ ಕೆಲಸ ನೀಡದೇ ಇರುವುದು ಇಂತಹ ಪ್ರವೃತ್ತಿಗಳು ಹೆಚ್ಚಾಗತೊಡಗಿವೆ. ಹಾಗಾಗಿ ಮೊದಲಿಗಿಂತ ಹೆಚ್ಚಾಗಿ ಇಂದು ಮದುವೆ-ಕೆರಿಯರ್ ಮಧ್ಯದ ಸಮಸ್ಯೆಗಳು ಮಹಿಳೆಯರಲ್ಲಿ ಆತಂಕವನ್ನು ಉಂಟುಮಾಡತೊಡಗಿವೆ.

ಈ ಉದಾರೀಕರಣ ಭಾಷೆ, ಸಂಸ್ಕೃತಿಯ ಬೇರುಗಳನ್ನು 'ಹಣ'ದ ಬೆಲೆಯಲ್ಲಿ ಅಳೆಯುವಂತಹ ಇಂದಿನ ಸಂದರ್ಭದಲ್ಲಿ ಸಾಹಿತ್ಯ, ನಾಟಕ, ಸಿನಿಮಾದಂತಹ ಮಾಧ್ಯಮಗಳೂ ಸಹ ಬಹಳಷ್ಟು ಒತ್ತಡಕ್ಕೆ ಒಳಗಾಗತೊಡಗಿವೆ. ಜನರನ್ನು ಮನರಂಜನೆ ಗೊಳಿಸುವಂತಹ ಕಡಿಮೆ ದರ್ಜೆಯ ಕಾನೂನುಗಳನ್ನು ಜನ ಮಾಧ್ಯಮಗಳಿಂದ ನಿರೀಕ್ಷಿಸುವಂತಾಗಿದೆ. ಗಂಭೀರ ಆಲೋಚನೆಯ ಹಾಗೂ ಸ್ಥಳೀಯ ಭಾಷೆಯ ಸಾಧ್ಯತೆಗಳನ್ನೇ ಉದಾರೀಕರಣ ಮೊಟಕುಗೊಳಿಸಿದೆ.

ಬದುಕನ್ನೇ ಕಷ್ಟಮಯವನ್ನಾಗಿಸುತ್ತಿರುವ ಉದಾರೀಕರಣದ ಬಂಡವಾಳ ನಮ್ಮೆಲ್ಲರ ದುಡಿಮೆ, ಸಮಯ, ಶ್ರಮ ಎಲ್ಲವನ್ನು ಕಸಿದುಕೊಳ್ಳುತ್ತಿರುವ ಸಂದರ್ಭದಲ್ಲಿ ಎಲ್ಲವನ್ನೂ ಬಿಟ್ಟು ಚಳುವಳಿಗೆ ದುಡಿಯುವ ಕಠಿಣವಾದ ಆಯ್ಕೆಯನ್ನು ನಮ್ಮ ಮುಂದೆ ಒಡ್ಡುತ್ತಿದೆ. ಆದಾಗ್ಯೂ ಚಳುವಳಿಗಳು ಮುಖ್ಯ, ನಮ್ಮ ಚಿಂತನಾಕ್ರಮಗಳನ್ನು ಬಿಗಿಗೊಳಿಸುವಂತಹ ಕಾರ್ಯಕ್ರಮಗಳು ಮುಖ್ಯ. ಸ್ವತಂತ್ರವಾಗಿ ಚಳುವಳಿಗಳ ಕಟ್ಟುವ ಸ್ಫೂರ್ತಿ ಇಂದು ಅತ್ಯಗತ್ಯವಾಗಿದೆ.

- ಸಂಪಾದಕ ಮಂಡಳಿ

ಜಾಗತೀಕರಣ ಹಾಗೂ ಏಷಿಯಾದ ಮಹಿಳೆಯರ ಸ್ಥಿತಿ-ಗತಿ

ಜಾಗತೀಕರಣದ ಮೊದಲು ಏಷಿಯಾ ಮಹಿಳೆಯರ ಸ್ಥಿತಿಗತಿ ಹೇಗಿತ್ತು ಎಂಬುದನ್ನು ಸಂಕ್ಷಿಪ್ತವಾಗಿ ನೋಡುವುದು ಅತ್ಯಾವಶ್ಯವಾಗುತ್ತದೆ. ಈ ಸಂದರ್ಭದಲ್ಲಿ ಸ್ತ್ರೀಯರ ಬದುಕಿನ ಮೇಲೆ ಪ್ರಭಾವಶಾಲಿಯಾದ ಪರಿಣಾಮವನ್ನು ಬೀರುತ್ತಿದ್ದುದು ಪಿತೃಪ್ರಧಾನ ವ್ಯವಸ್ಥೆ. ಏಷಿಯಾದಲ್ಲಿ ಪಿತೃಪ್ರಧಾನತೆ ಸ್ತ್ರೀಯರ ಜೀವನದ ಸಂಪೂರ್ಣ ಆಯಾಮವನ್ನು ಅಂದರೆ, ಧರ್ಮದಿಂದ ಹಿಡಿದು, ಮುಟ್ಟಾಗುವುದು. ಮಗುವಿನ ಜನನದವರೆಗೆ ವ್ಯಾಪಿಸಿತ್ತು. ದೇವರ ಸೃಷ್ಟಿ ಹಾಗೂ ಆದೇಶದಂತೆ ಸಮಾಜ ಒಪ್ಪಿಕೊಂಡಂತೆ ಸ್ತ್ರೀಯರ ಜೀವನ ದೇವರ ಹಾಗೂ ಪುರುಷರ ಸೇವೆಗೆ ಮೀಸಲಾಗಿತ್ತು. ಏಷಿಯಾದ ಸಂಸ್ಕೃತಿಗಳಲ್ಲೆಲ್ಲಾ ಆಕೆ ದಾಸ್ಯದ ಪಾತ್ರವನ್ನು ನಿರ್ವಹಿಸಬೇಕಾಗಿತ್ತು.

ಏಷಿಯಾದ ಬಹುಪಾಲು ರಾಷ್ಟ್ರಗಳು ಪ್ರಧಾನವಾಗಿ ವ್ಯವಸಾಯ ಮೂಲದ ಫ್ಯೂಡಲ್ ವ್ಯವಸ್ಥೆಯನ್ನು ಹೊಂದಿದ್ದವು. ಇವು ಪ್ರಮುಖವಾಗಿ ಆಹಾರ ಬೆಳೆಯನ್ನು ಬೆಳೆಯುತ್ತಿದ್ದವು. ಇಂತಹ ಆರ್ಥಿಕ ವ್ಯವಸ್ಥೆಯಲ್ಲಿ ಸ್ತ್ರೀಯರು ಉತ್ಪಾದನೆಯ ಪ್ರಕ್ರಿಯೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತಿದ್ದರು. ಆದರೆ ಅವರ ಶ್ರಮಕ್ಕೆ ತಕ್ಕ ಮಾನ್ಯತೆಯಾಗಲೀ ಬೆಲೆಯಾಗಲೀ ಇರಲಿಲ್ಲ. ಕುಟುಂಬದ ಸಂಪತ್ತು ಪುರುಷರ ಸ್ವಾಮ್ಯದಲ್ಲಿದ್ದುದರಿಂದ ಅದರ ನಿರ್ವಹಣೆ ಹಾಗೂ ನಿಯಂತ್ರಣ ಅವರ ಕೈಯಲ್ಲಿತ್ತು. ಇದಕ್ಕೆ ಹೊರತಾದ ಕೆಲವು ನಿದರ್ಶನಗಳೂ ಇದ್ದವು. ಸುಮಾತ್ರದ ಮೀನಾಂಗಕಬು ಜನರಲ್ಲಿ ಸ್ತ್ರೀಯರು ಭೂಮಿಯ ಯಜಮಾನಿಕೆಯನ್ನು ತಮ್ಮ ಹೆಸರಿನಲ್ಲಿ ಪಡೆದಿದ್ದರು. ಅವರ ಮರಣಾನಂತರ ಅದು ಅವರ ಮಕ್ಕಳಿಗೆ ಅಥವಾ ಸಂಬಂಧಿಕರಿಗೆ ಹೋಗುತ್ತಿತ್ತು. ಈ ಸಂಪ್ರದಾಯ ಮಲೇಶಿಯಾದ ಮೀನಾಂಗಕಬು ಜನಾಂಗದ ಜನರಲ್ಲಿ ಇಂದಿಗೂ ಮುಂದುವರಿದುಕೊಂಡು ಬಂದಿರುವುದು ಕಂಡುಬರುತ್ತಿದೆ.

ಮಹಿಳೆಯರ ಪಾತ್ರ ಸಂಪೂರ್ಣವಾಗಿ ಮನೆಗೆ ಸೀಮಿತವಾಗಿತ್ತು. ಅವರು ಧಾರ್ಮಿಕ ಆಚರಣೆಯಲ್ಲಿ ಭಾಗವಹಿಸುವುದು ಬರುಬರುತ್ತಾ ನಿಷ್ಕ್ರಿಯಗೊಂಡಿತು. ರಾಜಕೀಯವಾಗಿಯೂ ಸಹ ಸ್ತ್ರೀಯರು ಎರಡನೆಯ ದರ್ಜೆಯ ಪಾತ್ರವನ್ನು ವಹಿಸುತ್ತಿದ್ದರು. ಗ್ರಾಮದ ಆಡಳಿತ ಸಂಪೂರ್ಣವಾಗಿ ಪುರುಷರ ಕೈಯಲ್ಲಿತ್ತು. ಗ್ರಾಮಾಂತರ ಸಮುದಾಯದ ಮೇಲೆ ಪ್ರಭಾವ ಬೀರುವ ಪ್ರಮುಖ ನಿರ್ಧಾರಗಳನ್ನು ಪುರುಷರು ತೆಗೆದುಕೊಳ್ಳುತ್ತಿದ್ದರು.

ಈ ಹಿನ್ನೆಲೆಯಲ್ಲಿ ಜಾಗತೀಕರಣ ವಸಾಹತುಶಾಹಿ ರೂಪದಲ್ಲಿ ಏಷಿಯಾಕ್ಕೆ ಕಾಲಿಟ್ಟಿತು. ಲಿಂಗ ಅಸಮಾನತೆಯಿಂದಾಗಿ ಸ್ತ್ರೀಯರು ದ್ವಿತೀಯ ಪಾತ್ರವನ್ನು ನಿರ್ವಹಿಸಬೇಕಾಗಿತ್ತು. ಮಹಿಳೆಯರಿಗೆ ಅದರ ಮಾನವೀಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಕೆಲವೇ ಅವಕಾಶಗಳಿದ್ದವು.

ಸಾಮ್ರಾಜ್ಯಶಾಹಿ ಶಕ್ತಿಗಳು ಸ್ತ್ರೀಯರ ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋದವು. ತಮ್ಮದೇ ಆದ ಕಾನೂನು ವ್ಯವಸ್ಥೆಯನ್ನು ಜಾರಿಗೆ ತರುವುದರ ಮೂಲಕ ಪಿತೃಪ್ರಧಾನ ವ್ಯವಸ್ಥೆಯನ್ನು ಜಾರಿಗೆ ತರುವುದರ ಮೂಲಕ ಪಿತೃಪ್ರಧಾನ ವ್ಯವಸ್ಥೆಯನ್ನು ಬಲಗೊಳಿಸಿದವು. ಉದಾಹರಣೆಗೆ, ಭೂಮಿಯ ಒಡೆತನದ ಕಾನೂನನ್ನು ಜಾರಿಗೆ ತಂದಾಗ ಪುರುಷರು ಒಂದು ಜನಾಂಗದ, ಕುಟುಂಬದ ಅಧಿಕೃತ ಯಜಮಾನನಾದ. ವಾರಸುದಾರರ ಕಾನೂನು ಪುರುಷನನ್ನು ಮಕ್ಕಳ ಅಧಿಕೃತ ವಾರಸುದಾರರನ್ನಾಗಿ ಮಾಡಿತು. ಕೆಲವು ಸಂಸ್ಕೃತಿಯಲ್ಲಿ ಮಾತ್ರ ಉದಾ: ಮುಸ್ಲಿಂ ಕಾನೂನಿನಲ್ಲಿ 12 ವರ್ಷ ವಯಸ್ಸಿಗಿಂತ ಚಿಕ್ಕ ಮಕ್ಕಳ ವಾರಸುದಾರರು ಸ್ತ್ರೀಯರಾಗಿದ್ದಾರೆ.

ಸಾಮ್ರಾಜ್ಯಶಾಹಿ ಕೃಷಿ ಪದ್ಧತಿಯಂತಹ ಪ್ಲಾಂಟೇಶನ್ ಕೃಷಿಯಲ್ಲಿ ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿದ್ದರು. ನಗರ ಪ್ರದೇಶಗಳಲ್ಲಿ ಪುರುಷರಿಗೆ ಮಾತ್ರ ಅವಕಾಶ ಲಭ್ಯವಾಗುತ್ತಿದ್ದ ಹಾಗೆ ಮಹಿಳೆಯರು ತಮ್ಮನ್ನು ತಾವು ಪ್ಲಾಂಟೇಶನ್ ಕೃಷಿಯಲ್ಲಿ ತೊಡಗಿಸಿಕೊಂಡರು. ಬ್ರಿಟಿಶ್ ವಲಯದಲ್ಲಿ ಪುರುಷರಿಗೆ ಮಾತ್ರ ಅವಕಾಶವಿದ್ದುದರಿಂದ ಪ್ಲಾಂಟೇಶನ್ ಕೂಲಿಕಾರರಾಗಿ ಪುರುಷರು ಅಲ್ಲಿಗೆ ಹೋಗತೊಡಗಿದರು. ಕ್ರಮೇಣ ಭಾರತೀಯ ಹೆಣ್ಣುಮಕ್ಕಳನ್ನು ಸಹ ಕೃಷಿ ಕಾರ್ಮಿಕರಾಗಿ ದುಡಿಯಲು ಹಾಗೂ ಕೃಷಿ ಕಾರ್ಮಿಕರನ್ನು ದ್ವಿಗುಣಗೊಳಿಸುವ ಉದ್ದೇಶದಿಂದ ಇಲ್ಲಿಗೆ ಕರೆತರಲಾಯಿತು.

ಏಶಿಯಾದಲ್ಲಿ ಸಾಮ್ರಾಜ್ಯಶಾಹಿ ಅಧಿಕಾರಿಗಳು ಬದಲಾವಣೆಯಾದರೂ, ಸ್ತ್ರೀಯರಿಗೆ ಸಂಬಂಧಪಟ್ಟಂತೆ ಕೆಲವೇ ಬದಲಾವಣೆಗಳಾದವು. ರಾಜಕೀಯ ಅಧಿಕಾರ ಪುರುಷ ಪ್ರಧಾನ ರಾಜಕೀಯ ಪಕ್ಷದಿಂದ, ಪುರುಷ ನಾಯಕರಿಗೆ ಹಸ್ತಾಂತರಗೊಂಡಿತು. ಅವರು ಈ ಹಕ್ಕನ್ನು ತಮ್ಮ ತಂದೆ, ಗಂಡ, ಅಥವಾ ಕುಟುಂಬದಿಂದ ಪಡೆದುದರಿಂದ, ಕೆಲವೇ ಮಹಿಳಾ ರಾಜಕೀಯ ನಾಯಕಿಯರು ರಾಷ್ಟ್ರಮಟ್ಟದ ನಾಯಕಿಯರಾಗಲು ಸಾಧ್ಯವಾಯಿತು. ಇವರಲ್ಲಿ ಇಂದಿರಾಗಾಂಧಿ, ಸಿರಿಮಾವೊ ಬಂಡಾರೆ ನಾಯಕಿ, ಶ್ರೀಮತಿ

ಗೋಲ್ಡಾಮೀರ್ ಹಾಗೂ ಬೆನ್‌ಜೀರ್ ಭುಟ್ಟೋ. ಇಲ್ಲಿ ಗಮನಿಸಬೇಕಾದ ಕುತೂಹಲಕಾರಿಯಾದ ಒಂದು ಅಂಶವೆಂದರೆ, ಪಕ್ಷದಲ್ಲಿ ಇಂತಹ ಮಹಿಳೆಯರನ್ನು ಒಪ್ಪಿಕೊಳ್ಳಲು ಮುಖ್ಯ ಕಾರಣವೆಂದರೆ, ಪಕ್ಷದ ಜನರು ಒಬ್ಬ ಪುರುಷ ನಾಯಕ ನೇತೃತ್ವದಲ್ಲಿ ಕೆಲಸ ಮಾಡಲು, ಒಗ್ಗಟ್ಟಿನಿಂದಿರಲು ಹಿಂಜರಿಯುತ್ತಿದ್ದರು. ಇದು ಮಹಿಳಾ ನಾಯಕಿಯರ ಸಾಮರ್ಥ್ಯವನ್ನು ಅಳೆಯುವ ವಿಧಾನ ಖಂಡಿತಾ ಅಲ್ಲ. ಏಕೆಂದರೆ ಶ್ರೀಮತಿ ಇಂದಿರಾಗಾಂಧಿಯವರು ಒಂದು ಅವಧಿಯವರೆಗೆ ಆ ಪ್ರಜಾಪ್ರಭುತ್ವ ಮಾರ್ಗಗಳ ಮೂಲಕ ಇಡೀ ದೇಶವನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದರು. ಏಷಿಯನ್ ಇತಿಹಾಸದ ಈ ಹಂತದಲ್ಲಿ ಗಂಡು-ಹೆಣ್ಣಿನ ನಡುವಿನ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ. ಏಷಿಯಾದ ಹಲವಾರು ದೇಶಗಳು ತಮ್ಮ ಸ್ವಾತಂತ್ರ್ಯಾನಂತರ ಹಲವಾರು ಆರ್ಥಿಕ ಮಾದರಿಯೊಂದಿಗೆ ಪ್ರಯೋಗ ನಡೆಸಿದವು. ಆದರೆ ಬಹುಪಾಲು ರಾಷ್ಟ್ರಗಳು ಬಂಡವಾಳಶಾಹೀ ರಾಷ್ಟ್ರಗಳಾಗಿಯೇ ಉಳಿದುಕೊಂಡವು. ಏಕೆಂದರೆ ಸ್ವಾತಂತ್ರ್ಯ ಪೂರ್ವದ ಸಾಮ್ರಾಜ್ಯಶಾಹಿ ಶಕ್ತಿಗಳು ಸಮಾಜವಾದಿ ಮಾದರಿಯನ್ನು ಸಂಪೂರ್ಣವಾಗಿ ನಾಶಪಡಿಸಿದವು. ಬ್ರಿಟಿಶ್ ವಸಾಹತುಶಾಹಿ ದೇಶಗಳಲ್ಲಿ ರಾಜಕೀಯ ಅಧಿಕಾರವನ್ನು ಹಸ್ತಾಂತರಗೊಳಿಸುವ ಮೊದಲು ಸಮಾಜವಾದವನ್ನು ನಾಶಗೊಳಿಸಲಾಗಿತ್ತು. ಫ್ರೆಂಚ್ ಹಾಗೂ ಅಮೆರಿಕದ ವಸಾಹತುಗಳಾದ ವಿಯೆಟ್ನಾಮ್ ಹಾಗೂ ಕೊರಿಯಾದಲ್ಲಿ ಬಂಡವಾಳಶಾಹಿ ಹಾಗೂ ಸಮಾಜವಾದ ಎರಡನ್ನು ಅಸ್ತಿತ್ವದಲ್ಲಿಡಲು ಪ್ರಯತ್ನಿಸಿದ್ದರಿಂದ, ಅವು ಛಿದ್ರವಾಗಲು ಕಾರಣವಾಯಿತು.

ಸಾಮ್ರಾಜ್ಯಶಾಹಿ ವಿರುದ್ಧದ ಏಷಿಯಾದ ಎಲ್ಲಾ ಹೋರಾಟಗಳಲ್ಲಿ ಸ್ತ್ರೀಯರ ಭಾಗವಹಿಸಿದ್ದರೂ ಅದಕ್ಕೆ ಯಾವುದೇ ಮಾನ್ಯತೆ ದೊರೆಯಲಿಲ್ಲ. ಬಂಡವಾಳಶಾಹೀ ದೇಶಗಳಲ್ಲಿ ಸ್ತ್ರೀಯರ ಭಾಗವಹಿಸುವಿಕೆಯನ್ನು ಹಲವಾರು ಕಾರಣಗಳಿಗಾಗಿ ನಿರ್ಲಕ್ಷಿಸಲಾಯಿತು. ಇದಕ್ಕೆ ಮುಖ್ಯ ಕಾರಣವೆಂದರೆ ಬಹುಪಾಲು ಮಹಿಳಾ ಗುಂಪುಗಳು ಎಡಪಂಥೀಯ ರಾಜಕೀಯ ಆಲೋಚನೆಯನ್ನು ಬೆಂಬಲಿಸಿದವು. ಮಹಿಳೆಯರ ಕೊಡುಗೆಯನ್ನು ಮುಖ್ಯವೆಂದು ಪರಿಗಣಿಸದೆ ಇರಲು ಮುಖ್ಯಕಾರಣ ಪಿತೃಪ್ರಧಾನ ಮೌಲ್ಯ. ಇತ್ತೀಚಿನ ದಿನಗಳಲ್ಲಿ ಇತಿಹಾಸವನ್ನು ಮಹಿಳಾ ದೃಷ್ಟಿಕೋನದಿಂದ ನೋಡುವ ಪ್ರಯತ್ನ ಹೆಚ್ಚುತ್ತಿದ್ದರೂ, ಮಾಹಿತಿಯ ಕೊರತೆ ಮುಖ್ಯವಾಗಿ ಕಂಡು ಬರುತ್ತಿದೆ. ಸಾಮ್ರಾಜ್ಯಶಾಹಿಯ ವಿರುದ್ಧ ಕೊರಿಯಾ ಹಾಗೂ ವಿಯೆಟ್ನಾಮಿನ ಸ್ತ್ರೀಯರ ಹೋರಾಟ ಕಣ್ಣಿಗೆ ಕಾಣುವಂತಿದ್ದರೂ ಬಂದೂಕು ಹಿಡಿದ ಈ ಮಹಿಳೆಯರೂ ಸಹ ಲಿಂಗತಾರತಮ್ಯಕ್ಕೆ ಒಳಗಾಗಿದ್ದರು.

ಜಾಗತೀಕರಣದ ನಂತರದ ಹಂತದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಏಷಿಯಾದ ಆರ್ಥಿಕತೆಯನ್ನು ಆಳತೊಡಗಿದವು. ಮಹಿಳೆಯರು ಅಂತರ ರಾಷ್ಟ್ರೀಯ ಮಟ್ಟದ ಮುಂಚೂಣಿಗೆ ಬಂದರು. ಇದು ಸ್ತ್ರೀಯರ ಅಗ್ಗದ ಹಾಗೂ ಮೃದುವಾದ ಶ್ರಮದ ರೂಪವನ್ನು ಪಡೆಯಿತು. ಸ್ತ್ರೀಯರನ್ನು ನಾಲ್ಕು ಗೋಡೆಗೆ ಸೀಮಿತಗೊಳಿಸಿದ ಸಾಂಪ್ರದಾಯಿಕ ಪುರುಷ ಪ್ರಧಾನ ಕಾರ್ಖಾನೆಗಳಲ್ಲಿ ಸ್ತ್ರೀಯರು ದುಡಿಯುವಂತೆ ತಮ್ಮ ಹಿಡಿತವನ್ನು ಸಡಿಲಗೊಳಿಸಿದವು. ಸಾವಿರಾರು ಯುವತಿಯರು ಕೆಲಸವನ್ನರಸಿ ನಗರ ಪ್ರದೇಶದ ಕೈಗಾರಿಕಾ ಪ್ರದೇಶದ ಸುತ್ತಮುತ್ತ ನೆಲೆಯೂರಿದರು.

ಕ್ಷಿಪ್ರಗತಿಯಲ್ಲಿ ಸ್ತ್ರೀಯರು ದುಡಿಯುವ ಮಹಿಳೆಯರಾಗಿ ಮಾರ್ಪಟ್ಟರು. ಕುಟುಂಬದ ನಿರ್ವಹಣೆಗಾಗಿ ಅವರು ದುಡಿಯುವುದು ಅನಿವಾರ್ಯವಾಯಿತು. ರಾಷ್ಟ್ರೀಯ ಆದಾಯಕ್ಕೆ ಅವರ ಕೊಡುಗೆಯು ತೀವ್ರಗತಿಯಲ್ಲಿ ಹೆಚ್ಚಾಗಿದೆ. ಏಷಿಯಾದ ಬಹಳಷ್ಟು ದೇಶಗಳಲ್ಲಿ ಮಹಿಳೆಯರು ಪರಿಣಾಮಕಾರಿ ಕಾರ್ಮಿಕ ಸಂಘಟನೆಯನ್ನು ಕಟ್ಟದಂತೆ ತಡೆಯಲಾಯಿತು.

ಇದು ಸ್ತ್ರೀ-ಪುರುಷರ ಸಂಬಂಧದಲ್ಲಿ ಏನಾದರೂ ಬದಲಾವಣೆಯನ್ನು ತಂದಿದೆಯೆ? ಸಾಮಾನ್ಯವಾಗಿ ಸ್ತ್ರೀಪುರುಷರ ನಡುವಿನ ಸಂಬಂಧದಲ್ಲಿ ಯಾವುದೇ ಬದಲಾವಣೆಯಾಗದೆ. ಅವರ ಜೀವನದಲ್ಲಿ ಪ್ರಾಯಶಃ ಮೊದಲ ಬಾರಿಗೆ ಅವರಿಗೆ ಸಂಬಂಧಪಟ್ಟಂತೆ ಸ್ವಂತ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗಿದೆ. ತಮ್ಮ ಸ್ವಂತ ದುಡಿಮೆಯ ಹಣವನ್ನು ಹೇಗೆ ಖರ್ಚು ಮಾಡಬೇಕು, ಯಾರನ್ನು ಮದುವೆಯಾಗಬೇಕು, ಎಲ್ಲಿ ಕೆಲಸ ಮಾಡಬೇಕು ಎಂಬ ತೀರ್ಮಾನವನ್ನು ಅವರೇ ತೆಗೆದುಕೊಳ್ಳತೊಡಗಿದರು. ಈ ಎಲ್ಲಾ ಬದಲಾವಣೆಯಾಗಿದ್ದರೂ. ಅವರ ದುಡಿಮೆಯ ಬಹುಭಾಗವನ್ನು ಮನೆಗೆ ಕೊಡಬೇಕಾಗುತ್ತಿತ್ತು. ಏಷಿಯಾದ ಬಹುಪಾಲು ದೇಶಗಳಲ್ಲಿ ದುಡಿಯುವ ಮಹಿಳೆಯ ಬಗ್ಗೆ ಅವರ ನೈತಿಕತೆಯ ಬಗ್ಗೆ ನೇತ್ಯಾತ್ಮರ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲಾಯಿತು: ಉದಾ: ಏಷಿಯಾದಲ್ಲಿ ಶೇ. 70 ಕ್ಕಿಂತ ಹೆಚ್ಚು ಮಹಿಳಾ ಕಾರ್ಮಿಕರನ್ನು 'ಮಿನಾಹ ಕರೇನ್' ಎಂದು ಕರೆಯಲಾಗುತ್ತದೆ. ಮಿನಾಹ ಕರೇನ್ ಎಂದರೆ ಮಹಿಳಾ ಕಾರ್ಮಿಕರು, ಹಗುರ ನಡತೆಯುಳ್ಳವರಾಗಿದ್ದು, ಯಾವ ಪುರುಷನೊಂದಿಗಾದರೂ ಅವರು ಸಂಬಂಧ ಇಟ್ಟುಕೊಳ್ಳಲು ತಯಾರಿದ್ದಾರೆಂದರ್ಥ. ಕಾರ್ಖಾನೆಗಳಲ್ಲಿ ಕಂಡುಬರುವ ಯಾವುದೇ ರೀತಿಯ ಲೈಂಗಿಕ ಶೋಷಣೆಯ ಬಗ್ಗೆ ಯಾವುದೇ ಚರ್ಚೆ, ಅಥವಾ ಮಾತುಕತೆಯಾಗಲೀ ಕಂಡು ಬರುವುದಿಲ್ಲ.

ಪುರುಷರಿಗಿಂತ ಹೆಚ್ಚು ಅವಧಿಯವರೆಗೆ ಮಹಿಳೆಯರು ದುಡಿಯುತ್ತಾರೆ. 1995ರ ಮಾನವ ಅಭಿವೃದ್ಧಿಯ ವರದಿಯ ಪ್ರಕಾರ ಮಹಿಳೆಯರು ಪುರುಷರಿಗಿಂತ ಹೆಚ್ಚು ಸಮಯ ದುಡಿಯುತ್ತಾರೆ. ಅಭಿವೃದ್ಧಿಶೀಲ ದೇಶಗಳಲ್ಲಿ ಕೆಲಸದ ಒಟ್ಟು ಹೊರೆಯಲ್ಲಿ ಶೇ. 53ರಷ್ಟು ಕೆಲಸವನ್ನು ಮಹಿಳೆಯರು ನಿರ್ವಹಿಸುತ್ತಾರೆ. ವೇತನ ಪಡೆಯುವ ಕೆಲಸದಲ್ಲಿ 1/4 ಭಾಗ ಮಹಿಳೆಯರು ದುಡಿಯುತ್ತಾರೆ. ಇದು ರಾಷ್ಟ್ರೀಯ ಮಾಪನದ ವ್ಯವಸ್ಥೆಯಲ್ಲಿ ಸೇರುತ್ತದೆ. 3/4 ಭಾಗದ ಮಹಿಳೆಯರ ದುಡಿಮೆ ಅಗೋಚರವಾದದ್ದು ಹಾಗೂ ವೇತನ ರಹಿತವಾದದ್ದು.

ಏಷಿಯಾದ ಬಹುಪಾಲು ದೇಶಗಳಲ್ಲಿ ಲಿಂಗತಾರತಮ್ಯ ಧೋರಣೆಯು ಹೆಚ್ಚಿನ ಪ್ರಮಾಣದಲ್ಲಿ ಪ್ರಚಲಿತವಾಗಿದೆ. ಕೆಲವು ದೇಶಗಳಲ್ಲಿ ಮಹಿಳಾ ಚಳುವಳಿಯು ಸ್ತ್ರೀಯರ ಸಮಸ್ಯೆಯನ್ನು ಬೆಳಕಿಗೆ ತರುವಲ್ಲಿ ಹಾಗೂ ಹೋರಾಟ ನಡೆಸುವಲ್ಲಿ ಯಶಸ್ವಿಯಾಗಿದೆ. ಉದಾ: ಮಲೇಶಿಯಾದಲ್ಲಿ ಮಹಿಳೆಯರ ಮೇಲೆ ನಡೆಯುವ ಕೌಟುಂಬಿಕ ಹಿಂಸೆಯ ಸಮಸ್ಯೆಯು ಪ್ರಗತಿ ಪರ ಮಹಿಳಾ ಸಂಘಟನೆಗಳನ್ನು ಒಗ್ಗೂಡಿಸಿದ್ದಲ್ಲದೆ, ಕಾನೂನಿನ ಬದಲಾವಣೆಗಾಗಿ ದೀರ್ಘಕಾಲದ ಹೋರಾಟ ನಡೆಸಲು ಸಾಧ್ಯವಾಯಿತು. ಕೌಟುಂಬಿಕ ಹಿಂಸೆಗೆ ಸಂಬಂಧಪಟ್ಟ ಕಾನೂನು ರಚನೆಯಾಗಿದ್ದಲ್ಲದೆ, ಇದನ್ನು ಜಾರಿಗೆ ತರುವ ಪ್ರಕ್ರಿಯೆಯಲ್ಲಿ ಇದು ಮುಖ್ಯವಾಹಿನಿಯ ಪ್ರಮುಖ ವಿಚಾರವಾಗಿತ್ತು. ಈ ಸಮಸ್ಯೆಯ ಇತರ ಆಯಾಮಗಳನ್ನು ಕುರಿತು ಕೆಲಸ ಮಾಡಬೇಕೆಂಬ ಅಭಿಲಾಷೆ ಈ ಗುಂಪುಗಳಿಗಿದ್ದರೂ, ಮುಖ್ಯವಾಹಿನಿಯು ಈ ಪ್ರಯತ್ನವನ್ನು ವಿಳಂಬಗೊಳಿಸುತ್ತದೆ. ಇದರ ಜೊತೆಯಲ್ಲಿ ಬಹಳಷ್ಟು ಗುಂಪುಗಳು ಸರ್ಕಾರದ ಜೊತೆಗೆ ಕೆಲಸ ಮಾಡುತ್ತಿರುವುದರಿಂದ ಮಾನವ ಹಕ್ಕುಗಳಿಗೆ ಸಂಬಂಧಪಟ್ಟಂತೆ ಸರ್ಕಾರದ ವಿರುದ್ಧ ನಿರ್ಧಾರವನ್ನು ತೆಗೆದುಕೊಳ್ಳುವುದು ದುಸ್ತರವಾಗುತ್ತದೆ, ಇದಕ್ಕೆ ಮುಖ್ಯ ಕಾರಣ, ಇಂತಹ ನಿಲುವು ಅವರ ಕೆಲಸದ ಮೇಲೆ ಪ್ರತಿಕೂಲವಾದ ಪರಿಣಾಮವನ್ನು ಬೀರುತ್ತದೆ.

ದುಡಿಯುವ ಮಹಿಳೆಯರ ಸಮಸ್ಯೆಯನ್ನು ಕುರಿತು ಆಲೋಚಿಸಿದಾಗ ಅವರ ಸ್ಥಿತಿಗತಿಯು ಶೋಚನೀಯವಾಗಿರುವುದು ಕಂಡುಬರುತ್ತದೆ. ಬಹುಪಾಲು ದೇಶಗಳಲ್ಲಿ ದುಡಿಯುವ ಮಹಿಳೆಯರು ಸಂಘಟನೆಯಾಗದಂತೆ ತಡೆಯುವ ಪ್ರತಿಬಂಧಕಗಳಿವೆ. ಕೊರಿಯಾ ಹಾಗೂ ಫಿಲಿಫೈನ್ಸ್‌ಗಳಂತಹ ದೇಶಗಳಲ್ಲಿ ರಾಷ್ಟ್ರೀಯ ಮಹಿಳಾ ಸಂಘಗಳಿವೆ. ಆದರೆ ಇವು ಎಷ್ಟರಮಟ್ಟಿಗೆ ಲಿಂಗ ತಾರತಮ್ಯಕ್ಕೆ ಸಂಬಂಧಪಟ್ಟಂತೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆಯೆಂದು ಹೇಳುವುದು ಕಷ್ಟ. ದುಡಿಯುವ ಮಹಿಳಾ ಚಳುವಳಿ, ಮಹಿಳೆಯರಿಗೆ ಹಾಗೂ ಕಾರ್ಮಿಕರಿಗೆ ಸಂಬಂಧಪಟ್ಟ ಎರಡೂ ವಿಷಯವನ್ನು ಕುರಿತು ಗಮನವನ್ನು ಕೇಂದ್ರೀಕರಿಸಬೇಕಾಗಿದೆ. ಎರಡು ಸಮಸ್ಯೆಗಳು ವಿಭಿನ್ನ ಹಂತದ ಪ್ರಾಮುಖ್ಯತೆಯನ್ನು ಪಡೆದಿವೆಯೆಂಬುದು ಸಾಮಾನ್ಯ ನಂಬಿಕೆಯಾಗಿದೆ. ಸಾಮಾನ್ಯವಾಗಿ ಪುರುಷ ಕಾರ್ಮಿಕರು ಕಾರ್ಮಿಕರ ಹೋರಾಟಕ್ಕೆ ಪ್ರಥಮ ಸ್ಥಾನವನ್ನು ನೀಡುತ್ತಾರೆ. ಸ್ತ್ರೀ ಸಮಾನತೆ, ಅಥವಾ ಸ್ತ್ರೀವಾದವು ಕಾರ್ಮಿಕ ಚಳುವಳಿಯಲ್ಲಿ ಆದ್ಯತೆಯ ಸ್ಥಾನವನ್ನು ಪಡೆದಿರುವುದಿಲ್ಲ. ಮಲೇಶಿಯಾದಲ್ಲಿ ಕಾರ್ಮಿಕ ಚಳುವಳಿಯು ಲಿಂಗತಾರತಮ್ಯ ಕುರಿತ ಭಿನ್ನಾಭಿಪ್ರಾಯ ದಿಂದಾಗಿ ಇಬ್ಭಾಗವಾಗಿರುವುದು ಕಂಡುಬರುತ್ತದೆ.

ರಾಜಕೀಯ ಪಕ್ಷ ಹಾಗೂ ಕಾರ್ಮಿಕ ಸಂಘಟನೆಯ ರಚನೆ ಹಾಗೂ ಧೋರಣೆಗಳು ಪಿತೃಪ್ರಧಾನವಾಗಿರುವುದು, ದುಡಿಯುವ ಮಹಿಳೆಯರು ಎದುರಿಸಬೇಕಾದ ಒಂದು ಸಮಸ್ಯೆಯಾಗಿದೆ. ಕಾರ್ಮಿಕ ಸಂಘಟನೆಗಳಲ್ಲಿ ಸಹ ಶ್ರೇಣೀಕೃತ ವ್ಯವಸ್ಥೆ ಇರುವುದಲ್ಲದೆ, ಅಧಿಕಾರ ಉನ್ನತ ಸ್ಥಾನದಲ್ಲಿರುವವರಲ್ಲಿ ಕೇಂದ್ರೀಕೃತವಾಗಿರುತ್ತದೆ. ಉನ್ನತ ಸ್ಥಾನದಲ್ಲಿರುವ ಪುರುಷರೇ ಆಗಲಿ, ಮಹಿಳೆಯರೇ ಆಗಲಿ, ಅವರು ಪುರುಷರಿಂದ ಸೀಮಿತರಾಗಿರುತ್ತಾರೆ. ಉದಾಹರಣೆಗೆ, ಕಾರ್ಮಿಕ ಸಂಘಟನೆಗಳು ಮಹಿಳೆಯರ ಮೇಲಿರುವ ಕುಟುಂಬದ ಹೊರೆಯನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಕಾರ್ಮಿಕ ಸಂಘಟನೆಯ ಸಭೆಗಳಲ್ಲಿ ಮಹಿಳಾ ಸಮಸ್ಯೆಯನ್ನು ಚರ್ಚಿಸುವುದೇ ಇಲ್ಲ. ಆದುದರಿಂದ ಕೆಲವೇ ಮಹಿಳೆಯರು ರಾಜಕೀಯ ಪಕ್ಷದ ಅಥವಾ ಕಾರ್ಮಿಕ ನಾಯಕತ್ವವನ್ನು ಪ್ರಶ್ನಿಸುತ್ತಾರೆ. ಆದರೆ ಫಿಲಿಫೈನ್ಸ್ ಹಾಗೂ ಕೊರಿಯಾದಲ್ಲಿ ಮಹಿಳಾ ಕಾರ್ಮಿಕರ ಚಳುವಳಿಯು ಇದಕ್ಕೆ ಹೊರತಾಗಿವೆ. ಕಾರ್ಮಿಕ ಹೋರಾಟವು ಮಹಿಳಾ ಸಮಸ್ಯೆಯ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂಬುದನ್ನು ಮಹಿಳಾ ಕಾರ್ಮಿಕರ ಈ ಹೋರಾಟಗಳು ತೋರಿಸಿಕೊಟ್ಟಿವೆ.

ವರ್ಗ ಹೋರಾಟದ ಹಾಗೂ ಮಹಿಳಾ ಹೋರಾಟದ ಸಂಕೀರ್ಣತೆಯನ್ನು ನಾವು ಅರ್ಥಮಾಡಿಕೊಳ್ಳಬೇಕು. ವರ್ಗ ಹೋರಾಟದ ಹಾಗೂ ಸ್ತ್ರೀವಾದದ ತಾತ್ವಿಕತೆಯು ಪ್ರತ್ಯೇಕವಾಗಿ ಚಾಲ್ತಿಯಲ್ಲಿರುವುದನ್ನು ಕಾಣಬಹುದು. ಈ ಎರಡೂ ತಾತ್ವಿಕತೆಗಳನ್ನು ಒಂದುಗೂಡಿಸುವುದು ಮಹಿಳಾ ಕಾರ್ಮಿಕರಿಗೆ ಕಷ್ಟಕರವಾಗಿ ಕಂಡುಬರುತ್ತದೆ. ಈ ಕಾರಣದಿಂದಲೇ ಏಷಿಯಾದ ಸ್ತ್ರೀವಾದ ಹಾಗೂ ಮಹಿಳಾ ಸಂಘಟನೆಗಳು ಮಧ್ಯಮ ವರ್ಗದ ನೆಲೆಯನ್ನು ಹೊಂದಿವೆ. ●

ಜಾಗತೀಕರಣ ಸ್ತ್ರೀಯರ ಮೇಲೆ ನೇತ್ಯಾತ್ಮಕ ಪರಿಣಾಮವನ್ನು ಬೀರುತ್ತದೆ. ಆರ್ಥಿಕ ಅಭಿವೃದ್ಧಿ ಹಾಗೂ ಬೆಳವಣಿಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯ ಜೊತೆ ತಳುಕು ಹಾಕಿಕೊಂಡಿದೆ. ರಾಷ್ಟ್ರೀಯ ಆರ್ಥಿಕತೆ ಕುಸಿದಾಗಲೆಲ್ಲಾ ಸಾವಿರಾರು ಹೆಂಗಸರನ್ನು ಕೆಲಸದಿಂದ ತೆಗೆದುಹಾಕಲಾಗುವುದು, ಸಮಸ್ಯೆಗೆ ಯಾವುದೇ ರೀತಿಯ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಇದಕ್ಕೆ ಮುಖ್ಯ ಕಾರಣ ಅಂತರ ರಾಷ್ಟ್ರೀಯ ಬಂಡವಾಳ ಹಾಗೂ ರಾಷ್ಟ್ರೀಯ ಸರ್ಕಾರಗಳು ಮೂಲಭೂತ ಬದಲಾವಣೆಗಾಗಿ ಯಾವ ಪ್ರಯತ್ನವನ್ನು ಮಾಡದೇ ಇರುವುದೇ ಆಗಿದೆ. ಏಷಿಯಾದ ಈ ಆರ್ಥಿಕ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಸಾವಿರಾರು ಮಹಿಳೆಯರು ಕೆಲಸ ಕಳೆದುಕೊಂಡಿದ್ದಾರೆ.

ಜಾಗತೀಕರಣ ರಾಷ್ಟ್ರೀಯ ಸರ್ಕಾರಗಳನ್ನು ದುರ್ಬಲಗೊಳಿಸಿದೆ. ಕಾರ್ಮಿಕ ವಿರೋಧಿ ನೀತಿಯಿಂದಾಗಿ ತಮ್ಮ ಜನರನ್ನು ಅದರಲ್ಲೂ ವಿಶೇಷವಾಗಿ ಮಹಿಳೆಯರನ್ನು ಮಾರಲಾಗಿದೆ. ಏಷಿಯಾದ ಆರ್ಥಿಕತೆಯ ತವ್ಮೊಳಗೆ ನಡೆಯುವ ಸ್ಪರ್ಧೆಯಿಂದಾಗಿ ವೇತನದ ದರವನ್ನು ಕೆಳಗಿಳಿಯುವಂತೆ ಮಾಡಲಾಗಿದೆ. ಇದು ಮಹಿಳಾ ಕಾರ್ಮಿಕರ ಮೇಲೆ ತೀವ್ರವಾದ ಪರಿಣಾಮವನ್ನು ಬೀರಿದೆ.

ಜಾಗತೀಕರಣ ಪ್ರಭಾವದಿಂದ ಮಹಿಳೆಯರು ವೇತನ ಪಡೆಯುವ ಕೆಲಸಗಳನ್ನು ಅನಿವಾರ್ಯವಾಗಿ ಮಾಡಬೇಕಾಗಿದೆ. ಅವರ ಮೇಲಿರುವ ಕೌಟುಂಬಿಕ ಹೊರೆಯನ್ನು ಹಂಚಿಕೊಳ್ಳುವ ಯಾವುದೇ ಪ್ರಯತ್ನ ಕಂಡುಬರುವುದಿಲ್ಲ. ಹಾಗಾಗಿ ಸ್ತ್ರೀಯರು ದೀರ್ಘಾವಧಿ ಕೆಲಸ ಮಾಡಿ ಕಡಿಮೆ ವೇತನ ಪಡೆಯುಬೇಕಾಗುತ್ತದೆ. ಏಷಿಯಾದ ಮಾರುಕಟ್ಟೆಯಲ್ಲಿ ಶೇಕಡ 36ರಷ್ಟು ಸಮಯವನ್ನು ಸ್ತ್ರೀಯರು ನೀಡುತ್ತಾರೆ. ಮನೆಗೆಲಸಕ್ಕೂ ಸ್ತ್ರೀಯರ ಕೊಡುಗೆ ಮಹತ್ವದ್ದಾಗಿದೆ. ಜಾಗತೀಕರಣದ ಪ್ರಭಾವದಿಂದ ಸ್ತ್ರೀಯರ ಮೇಲಿನ ಜವಾಬ್ದಾರಿ ತೀವ್ರವಾಗಿದೆ. ಏಕೆಂದರೆ ಸ್ತ್ರೀಯರು ಕಡಿಮೆ ವೇತನಕ್ಕಾಗಿ ದೀರ್ಘಾವಧಿಯವರೆಗೆ ಕೆಲಸ ಮಾಡಬೇಕಾಗುತ್ತದೆ.

ಮಹಿಳೆಯರ ಮೇಲಿರುವ ಜವಾಬ್ದಾರಿಯನ್ನು ಹೆಚ್ಚಿಸುವ ತಂತ್ರವನ್ನು ಜಾಗತೀಕರಣ ಕಂಡುಕೊಂಡಿದೆ. ಒಪ್ಪಂದದ ಕೆಲಸ ನೀಡುವುದು, ಮನೆಗೆ ಕೆಲಸವನ್ನು ಕಳಿಸಿಕೊಡುವುದು ಮುಂತಾದವೇ ಈ ತಂತ್ರಗಳು. ಇದರಿಂದಾಗಿ ಒಂದೇ ಸ್ಥಳದಲ್ಲಿ ಮಹಿಳೆಯರು ವೇತನ ಪಡೆಯುವ ಹಾಗೂ ವೇತನ ರಹಿತ ಕೆಲಸಗಳನ್ನು ಮಾಡಬೇಕಾಗುತ್ತದೆ.

ಜಾಗತೀಕರಣದಿಂದಾಗಿ ಅಗತ್ಯ ವಸ್ತುಗಳ ಬೆಲೆಯು ಏರಿವೆ. ಆರೋಗ್ಯ, ಆಹಾರ, ನೀರು, ವಿದ್ಯುಚ್ಛಕ್ತಿ ಎಲ್ಲವೂ ಹೆಚ್ಚು ದುಬಾರಿಯಾಗಿದೆ. ಸ್ತ್ರೀಯರ ಆರೋಗ್ಯದ ಮೇಲೆ ಜಾಗತೀಕರಣ ಉಂಟುಮಾಡಿರುವ ಹಾನಿಯನ್ನು ಇನ್ನು ಲೆಕ್ಕಹಾಕಬೇಕಾಗಿದೆ. ಜಾಗತೀಕರಣ ಹೀಗೆ ಮಹಿಳೆಯರ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದುಕೊಂಡಿದೆ. ಸ್ತ್ರೀ ಪುರುಷರ ನಡುವಿರುವ ಅಂತರ ಇನ್ನೂ ಹೆಚ್ಚಾಗಿದೆ.

ನಿವೇದನೆ

ಇಷ್ಟು ದಿನ
ಕತ್ತಲ ಕೂಪದೊಳಗೆ
ಕಳೆದು ಹೋದವಳೀಗ
ಕವಲು ದಾರಿಯೊಂದರಲ್ಲಿ ಬಂದು ನಿಂತಿದ್ದೇನೆ.

ನನ್ನ ಹೆಸರಿನಲ್ಲಿ ಕಾದಾಡಿ ಮಹಿಮೆ
ಮೆರೆದ ರಾಜ ಮಹಾರಾಜರುಗಳ
ಇತಿಹಾಸದ ಪುಟಗಳಿಗೆ
ಬೆಂಕಿ ಹಚ್ಚಬೇಕೆಂದಿದ್ದೇನೆ.

ನನಗೀಗ ತಿಳಿದು ಹೋಗಿದೆ, ನನ್ನನ್ನು-
ಹಂಚಿ ತಿಂದ ಪಾಂಡವರ ಪುಗಸಟ್ಟೆ ಪುರಾಣ
ಕುಕ್ಕಿ ತಿಂದ ಕೌರವರ ಕ್ರೌರ್ಯದ ಕಥೆ
ಹರಾಜು ಹಾಕಿದ ಹರಿಶ್ಚಂದ್ರನ ಹರಕಲು ಕಥೆ
ಹಾಗೆಯೇ.....
ನೆನ್ನೆ ಮೊನ್ನೆ ಈ ನೆಲದ ತುಂಬಾ
ಹಸಿದು ಹರಿದ ಪೂಲನ್‌ದೇವಿಯ
ರಕ್ತದ ಕೊಳಕು ಕಲೆಗಳ ಕಲಾತ್ಮಕತೆ

ಸಾಕು, ಇಷ್ಟು ಸಾಕು.....
ನಾನಿನ್ನು ಮೊರೆ ಇಡಲಾರೆ, ತ್ವರೆ ಮಾಡಲಾರೆ
ನನ್ನ ಹೆಸರನ್ನ, ಉಸಿರ ಬಸಿರನ್ನು
ನಿಮ್ಮ ಪಾಪದ ಪುರಾಣಗಳಿಗೆ
ನಿಮ್ಮದೇ ತೆವಲುಗಳ ಕಥೆ ಕಾವ್ಯಗಳಿಗೆ
ಬಿಟ್ಟು ಕೊಡಲಾರೆ, ಹಾಗೆಯೇ
ನಾನಿನ್ನೆಂದೂ ನಿಮ್ಮ ಬಂಧಿಯಾಗಲಾರೆ
ನಿಮ್ಮ ಬಂಧನಕ್ಕೆ ಒಳಪಡಲಾರೆ
ಬಿಟ್ಟು ಬಿಡಿ ನನ್ನನ್ನು
ಬಂಧ ಮುಕ್ತಳಾಗಬೇಕು ನಾನು.

ವಿಜಯಲಕ್ಷ್ಮಿ ಮನಾಪುರ

ಇಸ್ರೇಲ್ ಮಹಿಳೆಯರ ಕುರಿತು ಒಂದು ಚಿತ್ರಣ

ಹೇಮಲತ ಹೆಚ್. ಎಂ., ಮೈಸೂರು

ಇಸ್ರೇಲ್ ಒಂದು ಪುಟ್ಟ ದೇಶ. ವಿಸ್ತೀಣ 20,772 ಕಿಲೋಮೀಟರ್ ಇದ್ದರೆ ಜನಸಂಖ್ಯೆ ಕೇವಲ 60.6 ದಶಲಕ್ಷದಷ್ಟಿದೆ. ಅಂದರೆ ವಿಸ್ತೀರ್ಣದಲ್ಲಿ ನಮ್ಮ ಮೈಸೂರು ಜಿಲ್ಲೆಯಷ್ಟಿದ್ದರೆ ಜನಸಂಖ್ಯೆಯಲ್ಲಿ ಬೆಂಗಳೂರು ನಗರದ ಜನಸಂಖ್ಯೆಗಿಂತ ಸ್ವಲ್ಪ ಹೆಚ್ಚಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ. 49 ಪುರುಷರು ಮತ್ತು ಶೇ. 51ರಷ್ಟು ಮಹಿಳೆಯರಿದ್ದಾರೆ. ಒಟ್ಟು ಸಾಕ್ಷರತೆ ಶೇ. 95ರಷ್ಟಿದೆ. ರಾಷ್ಟ್ರೀಯ ಭಾಷೆ ಹೀಬ್ರು. ದೇಶದ ಎರಡು ಪ್ರಮುಖ ಧರ್ಮಗಳು ಜುಡಾಯಿಸಮ್ ಮತ್ತು ಇಸ್ಲಾಮ್. 50 ಲಕ್ಷ ಜ್ಯೂಸ್ (ನಾವು ಯಹೂದಿಗಳು ಎಂದು ಕರೆಯುತ್ತೇವೆ) ಹಾಗೂ 10 ಲಕ್ಷ ಇಸ್ಲಾಂ ಧರ್ಮದವರಿದ್ದಾರೆ.

ಪ್ರಸ್ತುತ ಇಸ್ರೇಲಿನಲ್ಲಿ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಿದೆ. ಎಡಪಂಥೀಯ ಪಕ್ಷಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಅಧಿಕಾರ ಹೊಂದುವಲ್ಲಿ ಮುಂಚೂಣಿಯಲ್ಲಿವೆ. ಆದರೆ ಧರ್ಮ ಆಧರಿತ ಪಕ್ಷಗಳು ಸಂಸತ್ತಿನಲ್ಲಿ ಪ್ರಬಲವಾಗಿದ್ದು ದೇಶದ ನೀತಿ ನಿರೂಪಣೆಯ ಮೇಲೆ ಅಗಾಧವಾದ ಪ್ರಭಾವ ಬೀರುತ್ತವೆ.

ಕಳೆದ ಆರೇಳು ತಿಂಗಳುಗಳಿಂದ ಯಹೂದಿಗಳಿಗೂ ಹಾಗೂ ಅಲ್ಪಸಂಖ್ಯಾತರಾದ ಅರಬ್ಬ ಮುಸ್ಲಿಂರಿಗೂ (ಪ್ಯಾಲೆಸ್ಟೇನ್) ಘರ್ಷಣೆ ನಡೆಯುತ್ತಿದೆ. ದೇಶದ ಕೆಲವು ಭಾಗಗಳಲ್ಲಿ ಕೇಂದ್ರೀಕೃತವಾಗಿರುವ ಪ್ಯಾಲೆಸ್ಟೇನರಿಗೆ ಯಹೂದಿ ಸರ್ಕಾರ ಸ್ಥಳೀಯ ಸರ್ಕಾರವನ್ನು ರಚಿಸಿಕೊಳ್ಳಲು ಅವಕಾಶ ಕೊಟ್ಟಿದೆ. ಆದರೆ ಪ್ಯಾಲೆಸ್ಟೇನರು ಸ್ವತಂತ್ರ ರಾಷ್ಟ್ರ ಬೇಕೆಂದು ಮತ್ತು ಇತರ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಯಹೂದಿಗಳೊಂದಿಗೆ ಕಾದಾಡುತ್ತಿದ್ದಾರೆ. ಸದ್ಯಕ್ಕೆ ಅಮೆರಿಕದ ಮಧ್ಯಸ್ತಿಕೆಯೊಂದಿಗೆ ಎರಡು ಪಂಗಡಗಳ ನಡುವಿನ ಶಾಂತಿ ಸ್ಥಾಪನೆಗೆ ಮಾತುಕತೆ ನಡೆಯುತ್ತಿದೆ. ಒಟ್ಟಿನಲ್ಲಿ ಇಸ್ರೇಲ್ ಬಾಹ್ಯ ಹಾಗೂ ಆಂತರಿಕ ಅಭದ್ರತೆಯನ್ನು ಎದುರಿಸುತ್ತಿರುತ್ತದೆ.

ಇಂತಹ ಐತಿಹಾಸಿಕ, ಸಾಮಾಜಿಕ, ಆರ್ಥಿಕ ಮತ್ತು ಕಡ್ಡಾಯ ಸೇನಾ ಸೇವೆಯ ವ್ಯವಸ್ಥೆಯ ಹಿನ್ನೆಲೆಯಲ್ಲಿ ಇಸ್ರೇಲಿ ಮಹಿಳೆಯರ ಸ್ಥಾನ, ಹಕ್ಕು ಜೀವನ ರೀತಿ, ಹೋರಾಟ, ಸಂಘಟನೆ ಮುಂತಾದವುಗಳನ್ನು ನೋಡುವುದು ಮುಖ್ಯವಾಗುತ್ತದೆ.

ಜನಸಂಖ್ಯೆ, ಸಾಕ್ಷರತೆ, ಶಿಕ್ಷಣ, ಉದ್ಯೋಗ ಕ್ಷೇತ್ರಗಳಲ್ಲಿ ಇಸ್ರೇಲಿ ಮಹಿಳೆಯರು ಪುರುಷರಿಗೆ ಸಮಾನರಾಗಿದ್ದಾರೆ. ಸ್ತ್ರೀಯರ ಸಂಖ್ಯೆ ಪುರುಷರಿಗಿಂತ ಅಧಿಕವಾಗಿದ್ದು ಸೆಕ್ಸ್ ರೇಶಿಯೋ ಸ್ತ್ರೀಯರ ಪರವಾಗಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡ 51 ಮಹಿಳೆಯರಿದ್ದರೆ ಶೇಕಡ 49 ಪುರುಷರಿದ್ದಾರೆ. ಮಹಿಳಾ ಸಾಕ್ಷರತೆ ಶೇಕಡ ಸರಾಸರಿ ಶಿಕ್ಷಣ ವರ್ಷಗಳು ಪುರುಷರಿಗೆ 12.4 ಇದ್ದರೆ ಮಹಿಳೆಯರಿಗೆ 13 ವರ್ಷಗಳು. ಶಿಕ್ಷಣ ಕ್ಷೇತ್ರದಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳಿಗಿಂತ ಮುಂದಿದ್ದಾರೆ. ಶೇಕಡ 47ರಷ್ಟು ಹೆಣ್ಣುಮಕ್ಕಳು ಪದವಿ ಪಡೆದಿರುತ್ತಾರೆ.

ದುಡಿಮೆ ಕ್ಷೇತ್ರದಲ್ಲೂ ಮಹಿಳೆಯರು ಅಧಿಕ ಸಂಖ್ಯೆಯಲ್ಲಿದ್ದಾರೆ. ಶೇಕಡ 45ರಷ್ಟು ಮಹಿಳೆಯರು ಮನೆಯಿಂದ ಹೊರಗೆ ದುಡಿಯುತ್ತಾರೆ. ಸ್ತ್ರೀಯರ ಶಿಕ್ಷಣ ಮಟ್ಟಕ್ಕೂ ಮತ್ತು ಹೊರಗೆ ದುಡಿಯುವುದಕ್ಕೂ ನೇರ ಸಂಬಂಧವಿದೆ. ಒಟ್ಟು ಶ್ರಮ ಬಲದಲ್ಲಿ ಮಹಿಳೆಯರ ಪ್ರಮಾಣ ಶೇಕಡ 46, ಒಟ್ಟು ತಾಯಂದಿರಲ್ಲಿ ಶೇಕಡ 70 ಮಹಿಳೆಯರು ಹೊರಗೆ ದುಡಿಯುತ್ತಾರೆ.

ವಿವಿಧ ಸೇವಾ ಕ್ಷೇತ್ರಗಳಲ್ಲಿ ಮಹಿಳೆಯರ ಪ್ರಮಾಣ ನೋಡಿದರೆ ಸಾರ್ವಜನಿಕ ಮತ್ತು ಸಮುದಾಯಕ ಸೇವೆಗಳಲ್ಲಿ ಶೇ. 42, ಆಹಾರ ಮತ್ತು ವಾಣಿಜ್ಯದಲ್ಲಿ ಶೇ. 15, ಹಣಕಾಸಿನ ಸೇವೆಯಲ್ಲಿ ಶೇ. 12, ಹಾಗೂ ವೈಯಕ್ತಿಕ ಸೇವೆಗಳಲ್ಲಿ ಶೇ. 10ರಷ್ಟು ಮಹಿಳೆಯರಿದ್ದಾರೆ. ಶೇ. 27 ಮಹಿಳೆಯರು ಗುಮಾಸ್ತರಾಗಿ, ಶೇ. 24 ಮುಕ್ತ ವೃತ್ತಿಪರರಾಗಿ, ಶೇ. 20 ಇತರ ಸೇವೆಗಳಲ್ಲಿ ಹಾಗೂ ಶೇ. 19 ಮ್ಯಾನೇಜಿರಿಯಲ್ ಹುದ್ದೆಗಳಲ್ಲಿದ್ದಾರೆ. ಆದರೆ ಪುರುಷ ಮತ್ತು ಮಹಿಳೆಯರ ವೇತನದಲ್ಲಿ ವ್ಯತ್ಯಾಸವಿದೆ. ಪುರುಷರು ಈ ತಾರತಮ್ಯ ಸರಿಯಲ್ಲ ಸ್ತ್ರೀಯರು ಸಮಾನ ವೇತನ ಪಡೆಯಲು ಅರ್ಹರು ಎಂದು ನಂಬುತ್ತಾರೆ. ಈ ತಾರತಮ್ಯದ ವಿರುದ್ಧ ಮಹಿಳೆಯರು ದೊಡ್ಡ ಹೋರಾಟ ನಡೆಸಿಲ್ಲ. ಅದಕ್ಕೆ ಮುಖ್ಯ ಕಾರಣ ಕೆಲಸ ಕಳೆದುಕೊಳ್ಳಬಹುದೆಂಬ ಭಯ, ಕಾನೂನಿನ ಬಗ್ಗೆ ಅರಿವಿಲ್ಲದಿರುವುದು, ಆಡಳಿತ ವ್ಯವಸ್ಥೆಯ ವಿರುದ್ಧ ಹೋರಾಡುವುದು ಕಷ್ಟವಾಗಿದೆ.

ಅನೇಕ ಅಧ್ಯಯನಗಳು ತಿಳಿಸುವಂತೆ ವೃತ್ತಿಯಲ್ಲಿ

ತೊಡಗಿರುವ ವಿವಾಹಿತ ಮಹಿಳೆಯರು ಅತ್ಯಂತ ಕಡಿಮೆ ಕೌಟುಂಬಿಕ ಘರ್ಷಣೆಗಳಿಗೆ ಒಳಗಾಗುತ್ತಾರೆ. ಅವರು ಕುಟುಂಬ ಹಾಗೂ ವೃತ್ತಿ ಕ್ಷೇತ್ರಗಳೆರಡರಲ್ಲೂ ಯಶಸ್ವಿಯಾಗಿ ತಮ್ಮ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ಉತ್ತಮ ಶಿಕ್ಷಣ, ಆದಾಯ ಗಳಿಕೆ, ವೃತ್ತಿಪರ ತರಬೇತಿ ಪಡೆದ ಉದ್ಯೋಗಸ್ಥ ಮಹಿಳೆಯರು ಮನೆಯಲ್ಲಿರುವ ಮಹಿಳೆಯರಿಗಿಂತ ಹೆಚ್ಚಿನ ವೈವಾಹಿಕ ಜೀವನ ತೃಪ್ತಿಯನ್ನು ಹೊಂದಿದ್ದಾರೆ. ಉದ್ಯೋಗವು ಸ್ತ್ರೀಯರಿಗೆ ಆತ್ಮತೃಪ್ತಿ ನೀಡುವ ಸಾಧನವಾಗಿದೆ. ಸ್ತ್ರೀಯರು ಕುಟುಂಬಕ್ಕೆ ಆದ್ಯತೆ ನೀಡುವರು. ದುಡಿಯುವ ಮಹಿಳೆಗೆ ಇಸ್ರೇಲ್ ಸಮಾಜ ಸಾಂಸ್ಕೃತಿಕ ಮತ್ತು ಸಾಂಸ್ಥಿಕ ಬೆಂಬಲ ನೀಡುತ್ತದೆ. ದುಡಿಯುವ ಮಹಿಳೆಯರಿಗೆ ಬೆಂಬಲವಾಗಿ ಮಹಿಳಾ ಸಂಘಟನೆಗಳು ಮಕ್ಕಳನ್ನು ನೋಡಿಕೊಳ್ಳಲು ಶಿಶುವಿಹಾರಗಳನ್ನು ಅಧಿಕ ಸಂಖ್ಯೆಯಲ್ಲಿ ನಡೆಸುತ್ತವೆ.

ದುಡಿಯುವ ಮಹಿಳೆಯರ ಸಂಖ್ಯೆ ಅಧಿಕವಾಗಿದ್ದು ಅವರ ಶ್ರಮ ಕಡಿಮೆ ಮಾಡಲು ಮತ್ತು ಜೀವನವನ್ನು ಉತ್ತಮಪಡಿಸಲು ಮಹಿಳಾ ಸಂಘಟನೆಗಳು ಪ್ರಯತ್ನಿಸುತ್ತಿವೆ. ಅವುಗಳ ಪ್ರಯತ್ನ ಇನ್ನೂ ಹೆಚ್ಚು ಶಿಶುವಿಹಾರಗಳನ್ನು ತೆರೆಯುವುದು, ಕೆಲಸದ ಅವಧಿಯನ್ನು ಫ್ಲೆಕ್ಸಿಬಲ್ ಮಾಡುವುದು, ದೊಡ್ಡ ಮಕ್ಕಳಿಗೆ ಶಾಲೆಯ ಅವಧಿಯನ್ನು ಹೆಚ್ಚಿಸುವುದು, ತೆರಿಗೆ ವಿನಾಯಿತಿ, ಮನೆಯಲ್ಲೇ ಕೆಲಸ ಮಾಡಲು ಅನುಕೂಲ ಮಾಡಿಕೊಡುವುದು, ದುಡಿಯುವ ಮಹಿಳೆಯರ ಶ್ರಮ, ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು; ಸ್ತ್ರೀಯರಿಗೆ ಇನ್ನೂ ಉತ್ತಮ ಶಿಕ್ಷಣ ನೀಡುವ ಕಾಯಿದೆಗಳನ್ನು ಜಾರಿಗೊಳಿಸುವುದು, ಮತ್ತು ಮಹಿಳೆಯರಲ್ಲಿ ಅವರ ಹಕ್ಕು ಹಾಗೂ ಕಾಯಿದೆ ಕಾನೂನುಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಮಹಿಳಾ ಸಂಘಟನೆಗಳು ಕೆಲಸ ಮಾಡುತ್ತಿವೆ.

ಉನ್ನತ ತಾಂತ್ರಿಕ ಕ್ಷೇತ್ರದಲ್ಲಿ ಶೇ. 10 ಮಹಿಳೆಯರಿದ್ದಾರೆ. ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಅವರು ಅಧಿಕ ಸಂಖ್ಯೆಯಲ್ಲಿದ್ದರೂ, ಜಗತ್ತಿನ ಇತರ ರಾಷ್ಟ್ರಗಳಲ್ಲಿ ಕಂಡುಬರುವಂತೆ ಇಸ್ರೇಲಿನ ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ತುಂಬ ಕಡಿಮೆಯಿದೆ. ಶೇ. 10ಕ್ಕಿಂತ ಕಡಿಮೆ ಹೆಂಗಸರು ಸಂಸತ್ತಿನಲ್ಲಿದ್ದಾರೆ. 120 ಸಂಸತ್ ಸದಸ್ಯರಲ್ಲಿ ಹೆಂಗಸರ ಪ್ರಮಾಣ ಶೇ. 6.6 ರಿಂದ 9.1ರ ನಡುವೆ ಇರುತ್ತದೆ. ಸ್ತ್ರೀಯರು ಸಂಘಟನೆಯ ಮೂಲಕ ತಮ್ಮ ಪ್ರಾತಿನಿಧ್ಯವನ್ನು ಹೆಚ್ಚಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಆದರೆ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಟ್ಟುಪಾಡುಗಳು ಅವರ ಪ್ರಾತಿನಿಧ್ಯವನ್ನು ತಡೆಯುತ್ತವೆ. ಕುಟುಂಬದ ನಿರ್ವಹಣೆಗೆ ಆದ್ಯತೆ, ಹಣದ ಬೆಂಬಲ, ಸಾರ್ವಜನಿಕ ಸಂಪರ್ಕ ಹಾಗೂ ರಾಜಕೀಯ ಸಂಘಟನೆಯ ಕೊರತೆಯಿಂದ ಸ್ತ್ರೀಯರು ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಲು ಸಾಧ್ಯವಾಗುತ್ತಿಲ್ಲ.

ಇಸ್ರೇಲ್ ಸಮಾಜವು ಕೆಲವು ವಿರೋಧಾತ್ಮಕ ಅಂಶಗಳಿಂದ ಕೂಡಿದ್ದು ಘರ್ಷಣೆಗಳ ಮೂಲವಾಗಿವೆ. ಮಾನವೀಯ ಹಾಗೂ ಧಾರ್ಮಿಕ ತತ್ವಗಳೆರಡೂ ಚಾಲ್ತಿಯಲ್ಲಿವೆ. ಮಾನವೀಯ ತತ್ವಗಳು ಲಿಂಗ ತಾರತಮ್ಯವನ್ನು ಕಡಿಮೆ ಮಾಡಿದರೆ ಧಾರ್ಮಿಕ ನೀತಿಗಳು ಪುರುಷರಿಗೆ ಮತ್ತು ಮಹಿಳೆಯರಿಗೆ ಬೇರೆ ಬೇರೆ ಹಕ್ಕು ಹಾಗು ಕರ್ತವ್ಯಗಳನ್ನು ಹೇಳುತ್ತವೆ.

ಕಾನೂನು ವ್ಯವಸ್ಥೆಯು ಜಾತ್ಯಾತೀತ ಹಾಗೂ ಧಾರ್ಮಿಕ ತತ್ವಗಳನ್ನು ಆಧರಿಸಿವೆ. ಜಾತ್ಯಾತೀತ ತತ್ವ ಲಿಂಗ ಸಮಾನತೆಯನ್ನು ಪ್ರತಿಪಾದಿಸಿದರೆ ಧಾರ್ಮಿಕ ವ್ಯವಸ್ಥೆ ಸ್ತ್ರೀ-ಪುರುಷರಿಗೆ ಬೇರೆ ಬೇರೆ ಸ್ಥಾನಗಳನ್ನು ಕಲ್ಪಿಸಿಕೊಡುತ್ತದೆ.

ಸಾಮಾಜಿಕ ಕಟ್ಟುಪಾಡುಗಳು ಸ್ತ್ರೀಯರು ಹೊರಗೆ ದುಡಿಯುವುದನ್ನು ಪ್ರೋತ್ಸಾಹಿಸಿದರೂ ಕುಟುಂಬವನ್ನು ಕಡೆಗಣಿಸಿ ವೃತ್ತಿಗೆ ಆದ್ಯತೆ ನೀಡುವುದನ್ನು ಸಹಿಸುವುದಿಲ್ಲ. ಸ್ತ್ರೀಯರು ಉನ್ನತ ಹುದ್ದೆಗಳನ್ನು ಹೊಂದುವುದನ್ನು ಉತ್ತೇಜಿಸುವುದಿಲ್ಲ. ಅವರು ಎಷ್ಟೇ ಉನ್ನತ ಶಿಕ್ಷಣ ಹೊಂದಿದ್ದರೂ, ಉನ್ನತ ಹುದ್ದೆಯಲ್ಲಿದ್ದರೂ ಹುದ್ದೆಗಿಂತ ಕುಟುಂಬಕ್ಕೆ ಹೆಚ್ಚು ಬದ್ಧರಾಗಿರಬೇಕೆಂದು ಸಮಾಜವು ನಿರೀಕ್ಷಿಸುತ್ತದೆ.

ವಿವಾಹ ಮತ್ತು ವಿಚ್ಛೇದನ ವಿಷಯಗಳೆರಡು ಧಾರ್ಮಿಕ ನ್ಯಾಯಾಲಯಗಳ ಪರಿಧಿಯಲ್ಲಿ ಬರುತ್ತವೆ. ಬೇರೆ ದೇಶದಲ್ಲಿ ವಿವಾಹ ಅಥವಾ ವಿಚ್ಛೇದನ ನಡೆದಿದ್ದರೂ ಅದನ್ನು ಇಸ್ರೇಲ್ ರಾಜ್ಯವು ನ್ಯಾಯ ಸಮ್ಮತವೆಂದು ಗುರುತಿಸುತ್ತದೆ. ಯಹೂದಿ ಕಾಯಿದೆ ಪ್ರಕಾರ ಗಂಡಸರು ವಿಚ್ಛೇದನ ನೀಡಿದರೆ ಮಾತ್ರ ಹೆಂಗಸರಿಗೆ ವಿಚ್ಛೇದನ ದೊರೆಯುತ್ತದೆ. ಇದರಿಂದ ಅನೇಕ ಹೆಂಗಸರು ವಿಚ್ಛೇದನವಿಲ್ಲದೆ ವಿವಾಹಿತರಾಗಿಯೂ ಗಂಡನಿಲ್ಲದೆ ಜೀವನ ಮಾಡುತ್ತಿರುತ್ತಾರೆ.

ಸ್ತ್ರೀಯರು ಅಗ್ಗವಾಗಿ ಸಿಗುವ ಕೆಲಸಗಾರರಾಗಿದ್ದಾರೆ. ಹೆಚ್ಚು ಕೌಶಲ್ಯವಿಲ್ಲದ ಮತ್ತು ಹೆಚ್ಚು ಅಧಿಕಾರವಿಲ್ಲದ ಹುದ್ದೆಗಳನ್ನು ಹೊಂದಿರುತ್ತಾರೆ. ಪುರುಷರು ಹೆಚ್ಚಿನ ಅಧಿಕಾರ, ಆದಾಯ ಲಾಭ ಪಡೆಯಲು ಪೂರಕವಾಗಿ ಇವರು ಕೆಲಸ ಮಾಡುತ್ತಾರೆ. ಮನೆ ಕೆಲಸದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳ ಬೇಕಾಗಿರುವುದರಿಂದ ಹೆಂಗಸರು ಅಲ್ಪಾವಧಿ ಕೆಲಸ, ಬಿಡುವಾಗಿದ್ದಾಗ ಮಾಡುವ ಕೆಲಸ ಹಾಗೂ ಬಡ್ತಿ ಹೊಂದಲು ಸಾಧ್ಯವಿಲ್ಲದ ಕೆಲಸಗಳಲ್ಲಿ ಹೆಚ್ಚಾಗಿ ಕೇಂದ್ರೀಕೃತರಾಗಿರುತ್ತಾರೆ. ಹೆಂಗಸರು ಹೊರಗೆ ದುಡಿಯುವುದಕ್ಕೂ ಹಾಗೂ ಕುಟುಂಬದಲ್ಲಿ ಅವರು ಹೊಂದುವ ಸ್ಥಾನಕ್ಕೂ ಬಲವಾದ

ಸಂಬಂಧವಿದೆ. ಅವರ ಶ್ರಮವು ಅಗ್ಗವಾಗಿ ಸಿಗುವುದರಿಂದ ದುಡಿಮೆಯಲ್ಲಿ ಅವರನ್ನು ಎರಡನೇ ದರ್ಜೆಯ ಕೆಲಸಗಾರರನ್ನಾಗಿ ಗುರುತಿಸಲಾಗುತ್ತದೆ. ಆದರೆ ಗಂಡಸರನ್ನು ಮನೆಯ ಯಜಮಾನರನ್ನಾಗಿ ಗುರುತಿಸಲಾಗುತ್ತದೆ.

ಇಸ್ರೇಲಿನ ಆರ್ಥಿಕ ಬೆಳವಣಿಗೆ ಹೆಚ್ಚು ಹೆಚ್ಚು ಮಹಿಳೆಯರನ್ನು ದುಡಿಮೆ ಕ್ಷೇತ್ರಕ್ಕೆ ಸೇರಿಸುತ್ತಿದೆ. ಕುಟುಂಬದ ಆರ್ಥಿಕ ಪರಿಸ್ಥಿತಿ ಉತ್ತಮ ಪಡಿಸಲು ಎರಡನೇ ಆದಾಯದ ಅಗತ್ಯ ಹೆಚ್ಚಾಗುತ್ತಿದ್ದು ಹೆಂಗಸರು ಹೊರಗೆ ದುಡಿಯುವುದು ಅನಿವಾರ್ಯವಾಗುತ್ತಿದೆ. ಶಿಕ್ಷಣ ಮತ್ತು ಆರೋಗ್ಯ ಸಚಿವಾಲಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿಯ ಕಾರ್ಯಕ್ರಮಗಳ ಲಾಭವು ಮಹಿಳೆ ಮತ್ತು ಮಕ್ಕಳಿಗೆ ಸಲ್ಲುತ್ತಿದೆ. ಆದರೆ ಇತ್ತೀಚಿನ ಸರ್ಕಾರ ಈ ಸಚಿವಾಲಯಗಳ ವೆಚ್ಚಗಳನ್ನು ಕಡಿತಗೊಳಿಸಿರುವುದು, ಮಹಿಳೆಯರ ಮೇಲೆ ಪ್ರತಿಕೂಲ ಪ್ರಭಾವ ಬೀರುತ್ತಿದೆ.

ಕಾನೂನಿನ ಕ್ಷೇತ್ರವನ್ನು ತೆಗೆದುಕೊಂಡರೆ ಇಸ್ರೇಲ್ ರಾಷ್ಟ್ರವು ತನ್ನೆಲ್ಲ ಪ್ರಜೆಗಳಿಗೂ ಧರ್ಮ, ಜನಾಂಗ ಮತ್ತು ಲಿಂಗ ಭೇದವಿಲ್ಲದೆ ಸಮಾನ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದಂತೆ ಕೆಲವು ಕಾಯಿದೆಗಳನ್ನು ನಾವು ಗಮನಿಸಬಹುದು.

ಸ್ತ್ರೀಯರ ಹಿತರಕ್ಷಣೆಗೆ ಸಾಮಾನ್ಯ ಕಾಯಿದೆಗಳು ಮತ್ತು ಮಹಿಳೆಯರಿಗೆ ಸಂಬಂಧಪಟ್ಟ ಕಾಯಿದೆಗಳು ಹಲವಾರು ಇದ್ದರೂ ಅವುಗಳ ಸಂಪೂರ್ಣ ಬಳಕೆ ಆಗಬೇಕಾಗಿದೆ. ಮಹಿಳೆಯರಲ್ಲಿ ಕಾನೂನು ಅರಿವು ಹೆಚ್ಚಾಗಬೇಕೆಂದು ಮಹಿಳಾ ಸಂಘಟನೆಗಳು ಹೇಳುತ್ತವೆ.

ಇಸ್ರೇಲ್‌ನಲ್ಲಿ ಮಹಿಳಾ ಸಂಘಟನೆಗಳು ಅಧಿಕ ಸಂಖ್ಯೆಯಲ್ಲಿದ್ದು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿವೆ. ಇವುಗಳ ಕುರಿತು ಈ ಲೇಖನದ ಮುಂಭಾಗದಲ್ಲಿ ನೋಡೋಣ. ●

ಸಂಗತಿ

ಬಿಸಿಯಪ್ಪುಗೆಯಲಿ ಮೈಮರೆತು
ತೆಕ್ಕೆಯಲಿ ಬಿದ್ದು
ಬಿಸಿಯಿಳಿದಾಗ ಮಂಡಿಗೆಯೆತ್ತಿ ಒದ್ದು
ಕತ್ತು ಹಿಸುಕುವ ಕದ್ದು.

ಶ್ರೀಮತಿ ಕಲ್ಪನಾ ಭಟ್

ನಕ್ಕುಬಿಡು ಗೆಳತಿ

ನೀನೂ ಸಿಂಗರಿಸಿ ಹಿಡಿದ
ಭಾವ ಚಿತ್ರ ನೋಡಿದ್ದೇನೆ
ನಿನ್ನ ಕಂಗಳಲ್ಲಿ ಅಡಗಿದ್ದ
ಕನಸುಗಳ ಎಣಿಸಿದ್ದೇನೆ
ಭಾವನೆ ಎಂಬ ಉಯ್ಯಾಲೆಯಲಿ
ತೂಗಿದ್ದೂ ಕಂಡಿದ್ದೇನೆ
ಸೊಂಟಕೆ ಸಿಕ್ಕಿಸಿದ ಡಾಬು
ಹಣೆಗೆ ಇಟ್ಟ ಬೈತಲೆ ಬೊಟ್ಟು
ಹೆಣೆದಿದ್ದ ನಾಗರ, ಜಡೆಬಿಲ್ಲೆ
ಮೊಗ್ಗಿನ ಸರಮಾಲೆ
ಹಸಿರ ರೇಶಿಮೆ ನೆರಿಗೆಯಲ್ಲಿ
ಹುದುಗಿದ್ದ ನಕ್ಷತ್ರರಾಶಿ ಹೊಳಪು...
ನಿನ್ನ ಮುಗುಳ್ನಗೆಯ
ಆ ನೋಟ!
ಏಕೋ ಬಿಗುಮಾನದ ಕೊರಗು
ಹೀಗೆಯೇ, ಒಂದು ಬಾರಿ ಸಿಂಗರಿಸಿಕೊಂಡ
ನಿನ್ನ, ಭಾವಚಿತ್ರ ಅಣಕಿಸುವಂತೆ,
ಪಂಜರ ಗಿಣಿ ಕೂಡ ಅಲಂಕೃತಳು
ರೆಕ್ಕೆ ಮುರಿದ ಪಾರಿವಾಳ
ಶಾಂತಿ ದೂತಳು
ಇಬ್ಬರು ನಿನ್ನ ಹಾಗೆ
ಪಂಜರ, ಪಂಜರ, ಪಂಜರ,
ಗಿಣಿಗೂ, ಪಾರಿವಾಳಕೂ.....
ಸ್ವಾತಂತ್ರ್ಯ ಸಿಕ್ಕಿದೆಯೇ....
ನಿನಗೆ ಸಿಕ್ಕಲ್ಲಿ
ಅಡ್ಡಾಡಿಬಿಡು, ಕುಣಿದು ಕುಪ್ಪಳಿಸಿಬಿಡು
ಗೆಳತಿ!.....

ಒಮ್ಮೆ ಸಿಕ್ಕ ಸ್ವಾತಂತ್ರ್ಯ
ಮತ್ತೇ ಸಿಕ್ಕೀತೇ......
ನಿನ್ನ ಹಣೆಯ ತಿಲಕ ಕರಗಿ
ಸೆಲೆಯಾಗಿ ಧರೆಗೆ ಔತಣವಾಗುವ ಮುನ್ನ
ನೀ ಹಿಡಿದ ಕಾಪಾಲಿಕೆಯಲಿ
ರಕ್ತ ಕುಲುಕಿ ಒಟ್ಟಾರೆ
ಗಿಲ್ಕಿ ಆಡುವ ಮುನ್ನ
ಮಮತೆ, ಪ್ರೀತಿ, ವಾತ್ಸಲ್ಯ , ನೀತಿ, ಶಾಂತಿ
ನಿನ್ನಲೇ ಅಡಗಿ, ತೆರೆ ಮರೆಯಾಗಿಸುವ ಮುನ್ನ
ನಕ್ಕು ಬಿಡು
ಬಿಗುಮಾನ ಬೇಡ ಗೆಳತಿ
ಜೀವನ ಭಾವ ಚಿತ್ರವಲ್ಲಾ........

ಹಂಸಾ. ಆರ್

1) ಕೌನ್ಸಿಲ್ ಆಫ್ ವುಮೆನ್ಸ್ ಆರ್ಗನೈಜೇಶನ್

ಇದು ಒಂಭತ್ತು ಪ್ರಮುಖ ಮಹಿಳಾ ಸಂಘಟನೆಗಳು ಒಟ್ಟಾಗಿ ಸೇರಿ ಮಾಡಿಕೊಂಡಿರುವ ಒಂದು ಫೋರಮ್. ಇದರ ಮಂಡಳಿಯಲ್ಲಿ 31 ಜನ ಸದಸ್ಯರಿದ್ದಾರೆ. ಇದರ ಒಟ್ಟು ಸದಸ್ಯರ ಸಂಖ್ಯೆ 10 ಲಕ್ಷ.

ಈ ಕೌನ್ಸಿಲ್ ಇಸ್ರೇಲ್ ಮಹಿಳೆಯರು ಮತ್ತು ಇತರ ದೇಶಗಳ ಮಹಿಳೆಯರ ನಡುವೆ ಸಂಪರ್ಕ ಕಲ್ಪಿಸಿ ಅವರ ಸಂಬಂಧವನ್ನು ಬಲಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಇದು ಇಂಟರ್‌ನ್ಯಾಷನಲ್ ಕೌನ್ಸಿಲ್ ಆಫ್ ವುಮೆನ್ ಮತ್ತು ಇಂಟರ್‌ನ್ಯಾಷನಲ್ ಕೌನ್ಸಿಲ್ ಆಫ್ ಜುಯಿಷ್ ವುಮೆನ್‌ಗೆ ಅಫಿಲಿಯೇಟ್ ಆಗಿದೆ ಮತ್ತು ಯುನೈಟೆಡ್ ನೇಷನ್ಸ್ ಹಾಗೂ ಸರ್ಕಾರೇತರ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದೆ. ಇಸ್ರೇಲಿನಲ್ಲಿ ಈ ಕೌನ್ಸಿಲ್ ವಿವಿಧ ಸಂಘಟನೆಗಳನ್ನು ಒಗ್ಗೂಡಿಸಿ ಮಹಿಳೆಯರ ಹಕ್ಕು, ಕ್ಷೇಮಾಭಿವೃದ್ಧಿ, ಸಶಕ್ತೀಕರಣ, ಜೀವನದ ಎಲ್ಲಾ ಸ್ತರಗಳಲ್ಲೂ ಮಹಿಳೆಯರು ಉನ್ನತ ಸ್ಥಾನಗಳನ್ನು ಹೊಂದುವಂತೆ ಮಾಡುವುದು ಮುಂತಾದ ವಿಷಯಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

2) ನಾಮಾತ್

ಇದು ಉದ್ಯೋಗಸ್ಥ ಮಹಿಳೆಯರು ಮತ್ತು ಸ್ವಯಂ ಸೇವಕರ ಚಳುವಳಿ ಸಂಘಟನೆ. ಇದರಲ್ಲಿ ಸುಮಾರು 8 ಲಕ್ಷ ಸದಸ್ಯರಿದ್ದಾರೆ ಇಸ್ರೇಲ್‌ನಲ್ಲೆ ಅತ್ಯಂತ ದೊಡ್ಡ ಮಹಿಳಾ ಸಂಘಟನೆಯಾಗಿದೆ. ಯಹೂದಿ, ಮುಸ್ಲಿಮ್, ಕ್ರಿಶ್ಚಿಯನ್, ಡ್ರೂಸ್, ಹೊಸ ವಲಸೆಗಾರರು, ಹಳೇ ಇಸ್ರೇಲಿ ಮಹಿಳೆಯರು ಹೀಗೆ ವಿವಿಧ ಧರ್ಮ ಮತ್ತು ಎತ್ನಿಕ್ ಗುಂಪುಗಳನ್ನು ಪ್ರತಿನಿಧಿಸುವ ಸದಸ್ಯರು ಈ ಸಂಘಟನೆಯಲ್ಲಿದ್ದಾರೆ. ಇಸ್ರೇಲಿನ ಉದ್ಯೋಗಸ್ಥ ಸ್ತ್ರೀಯರ ಸ್ಥಾನವನ್ನು ಉತ್ತಮಗೊಳಿಸುವ ಗುರಿಯನ್ನಿಟ್ಟುಕೊಂಡಿದೆ. ಬಡತನದ ಸ್ತ್ರೀಕರಣ (Feminisation of poverty) ಹಾಗು ನಿರುದ್ಯೋಗದ ವಿರುದ್ಧ ಹೋರಾಡುತ್ತಿದೆ. ಸ್ತ್ರೀಯರು ಚಿಕ್ಕ ಉದ್ದಿಮೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುತ್ತದೆ. ವ್ಯಾಪಾರ ವಹಿವಾಟು ಕ್ಷೇತ್ರದಲ್ಲಿ ನಿರ್ಧಾರ ಕೈಗೊಳ್ಳುವ ಸ್ಥಾನಗಳನ್ನು ಮಹಿಳೆಯರು ಪಡೆಯಲು ಉತ್ತೇಜನ ನೀಡುತ್ತದೆ. ಲಿಂಗ ಸಮಾನತೆಗೆ ಸರ್ಕಾರದ ಜೊತೆ ಲಾಬಿ ಮಾಡುತ್ತದೆ. ಕೆಲಸದ ಸ್ಥಳವು ಸೇರಿದಂತೆ ಸಮಾಜದ ಯಾವುದೇ ಸ್ಥಳದಲ್ಲಿ ನಡೆಯುವ ಲಿಂಗ ತಾರತಮ್ಯದ ವಿರುದ್ಧ ಹೋರಾಡುತ್ತದೆ. ಶೈಕ್ಷಣಿಕ ವಿಚಾರ ಸಂಕಿರಣಗಳನ್ನು ನಡೆಸುತ್ತದೆ. ಉಪನ್ಯಾಸ, ಗುಂಪು ಚರ್ಚೆಗಳನ್ನು ನಡೆಸಿ ಜನರಲ್ಲಿ ಅರಿವು ಮೂಡಿಸುತ್ತದೆ ಮತ್ತು ಕಾನೂನು ಸಾಕ್ಷರತೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತದೆ.

ಈ ಸಂಘಟನೆ ಅನೇಕ ಸಮಾಜ ಕಾರ್ಯಗಳನ್ನು ಕೈಗೊಳ್ಳುತ್ತದೆ. ಕಾನೂನು ಸಲಹಾ ಸಮಿತಿಯನ್ನು ಹೊಂದಿದೆ, ಕೌಟುಂಬಿಕ ಹಿಂಸೆ ತಡೆಯಲು ಕೌನ್ಸಿಲಿಂಗ್ ಸೆಂಟರ್ ಉದ್ಯೋಗಸ್ಥ ತಂದೆತಾಯಿಗಳ ಮಕ್ಕಳಿಗೆ ಶಿಶುವಿಹಾರ (ಡೇ ಕೇರ್ ಸೆಂಟರ್) ಮತ್ತು ವೃತ್ತಿಪರ ಹಾಗೂ ಕೃಷಿ ಪ್ರೌಢಶಾಲೆಗಳನ್ನು ನಡೆಸುತ್ತದೆ.

3) ಇಸ್ರೇಲ್ ಫೆಡರೇಶನ್ ಆಫ್ ದಿ ವುಮೆನ್ಸ್ ಇಂಟರ್‌ನ್ಯಾಷನಲ್ ಝಿಯೋನಿಸ್ಟ ಆರ್ಗನೈಜೇಶನ್ (WIZO)

ಇದು 1 ಲಕ್ಷ ಸದಸ್ಯರನ್ನು ಹೊಂದಿದೆ. ವಿಶ್ವಸಂಸ್ಥೆಯು ಗುರುತಿಸಿರುವ ಒಂದು ಸ್ವಯಂ ಸೇವಾ ಸಂಸ್ಥೆ. ಯುನಿಸೆಫ್ ಮತ್ತು ಇ ಸಿ ಜಿ ಎಸ್ ಓ ಸಿ ಗೆ ಸಲಹಾ ಸಂಸ್ಥೆಯಾಗಿದೆ. ಮಹಿಳೆಯರ ಸ್ಥಾನವನ್ನು ಉತ್ತಮಪಡಿಸುವುದು ಅವರ ಹಕ್ಕುಗಳನ್ನು ರಕ್ಷಿಸುವುದು ಹಾಗೂ ಎಲ್ಲಾ ಕ್ಷೇತ್ರಗಳಲ್ಲೂ ಲಿಂಗಸಮಾನತೆ ಸಾಧಿಸುವುದು ಇದರ ಗುರಿಯಾಗಿದೆ. ತಂದೆ ಅಥವಾ ತಾಯಿ ಬಿಟ್ಟರೆ ಇರುವ ಕುಟುಂಬ, ಮಹಿಳೆ, ಮಕ್ಕಳು ಹಾಗೂ ವಯಸ್ಸಾದವರಿಗೆ ಹೆಚ್ಚು ಗಮನ ನೀಡಿ ಕುಟುಂಬ ಮತ್ತು ಸಮುದಾಯದ ಕ್ಷೇಮಾಭಿವೃದ್ಧಿಗೆ ಕೊಡುಗೆ ನೀಡುತ್ತಾ ಬಂದಿದೆ. ವಿಜೊ (WIZO) ಸುಮಾರು 800 ಸಂಸ್ಥೆಗಳು ಹಾಗೂ ಸೇವಾಕೇಂದ್ರಗಳನ್ನು ನಡೆಸುತ್ತಿದ್ದು ಯಹೂದಿ ಮತ್ತು ಯಹೂದಿಯಲ್ಲದ ಎರಡೂ ಸಮುದಾಯಗಳ ಮಹಿಳೆಯರಿಗೂ ಒಂದೇ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದೆ. ಇದರ ಪ್ರಮುಖ ಕಾರ್ಯಘಟಕಗಳೆಂದರೆ ಶಿಶುವಿಹಾರ, ಶಾಲೆ, ಯೂತ್ ಕ್ಲಬ್, ಮಕ್ಕಳಿಗೆ ಮತ್ತು ಯುವ ಜನರಿಗೆ ಚಿಕಿತ್ಸಾ ಕೇಂದ್ರ, ಪುನರ್‌ವಸತೀಕರಣ ಕೇಂದ್ರ, ಕಾನೂನು ಸಲಹೆ ನೀಡಲು ಕುಟುಂಬ ಸಲಹಾ ಕೇಂದ್ರ, ತುರ್ತುಕರೆಗಳು, ಹೊಡೆಯಲ್ಪಟ್ಟ ಮಹಿಳೆಯರಿಗೆ

ಆಶ್ರಮಧಾಮಗಳು, ಸಂಕಷ್ಟದಲ್ಲಿ ಸಿಲುಕಿರುವ ಹೆಣ್ಣುಮಕ್ಕಳಿಗೆ ಆಶ್ರಯ ನೀಡುವುದು, ಕುಟುಂಬ ಮತ್ತು ಸಮುದಾಯ ಕಲ್ಯಾಣ ಯೋಜನೆಗಳನ್ನು ಕೈಗೊಳ್ಳುವುದು, ಹೊಸದಾಗಿ ವಲಸೆ ಬಂದ ಜನರಿಗೆ ಸಹಾಯ ಮಾಡುವುದು ಮುಂತಾದ ವಿಭಾಗ ಹಾಗೂ ಸೇವಾ ಸೌಲಭ್ಯಗಳನ್ನು ಒದಗಿಸುತ್ತದೆ.

4) ಎಮುನ (EMUNAH)

ನ್ಯಾಷನಲ್ ರಿಲೀಜಿಯನ್ ವುಮೆನ್ಸ್ ಆರ್ಗನೈಜೇಶನ್. ಇದರಲ್ಲಿ 1 ಲಕ್ಷದ 30 ಸಾವಿರ ಸದಸ್ಯರಿದ್ದಾರೆ. ಇದು ಶಿಕ್ಷಣ ಮತ್ತು ಸಮಾಜ ಸೇವಾ ಚಟುವಟಿಕೆಗಳನ್ನು ಗುರಿಯಾಗಿಟ್ಟುಕೊಂಡಿದೆ. ಯಹೂದಿ ಮೌಲ್ಯಗಳಿಗೆ ಒತ್ತು ನೀಡುತ್ತದೆ. ಹೆಣ್ಣು ಮಕ್ಕಳ ಪ್ರೌಢ ಶಿಕ್ಷಣವೂ ಸೇರಿದಂತೆ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವಾಗಿದೆ. ವಿವಾಹ ಪೂರ್ವ ಸಲಹೆ, ವಯಸ್ಕರ ಶಿಕ್ಷಣ ಮತ್ತು ವೃದ್ಧರಿಗೆ ವಿವಿಧ ಸೇವೆಗಳನ್ನು ನೀಡುವಂತಹ ಕಾರ್ಯಗಳನ್ನು ಹಮ್ಮಿಕೊಳ್ಳುತ್ತದೆ.

5) ವುಮೆನ್ಸ್ ಇಸ್ರೇಲ್ ಓ. ಆರ್. ಟಿ (ORT)

ನಲವತ್ತು ಸಾವಿರ ಸದಸ್ಯರನ್ನು ಹೊಂದಿದೆ. ಇದು ವೃತ್ತಿಪರ ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಉತ್ತೇಜನ ನೀಡುತ್ತದೆ. ಪ್ರೌಢಶಾಲೆಯಿಂದ ಹಿಡಿದು ವಯಸ್ಕರ ಶಿಕ್ಷಣದವರೆಗೆ ಶೈಕ್ಷಣಿಕ ಸಂಸ್ಥೆಗಳ ಸಂಪರ್ಕ ಜಾಲವನ್ನು ಹೊಂದಿದೆ.

6) ಆರ್ಗನೈಜೇಶನ್ ಆಫ್ ಹಿರತ್ ವುಮೆನ್ ಇನ್ ಇಸ್ರೇಲ್

18 ಸಾವಿರ ಸದಸ್ಯರನ್ನು ಹೊಂದಿದೆ. ಇದು ಹಿರತ್ ಎಂಬ ರಾಜಕೀಯ ಪಕ್ಷದ ಅಂಗವಾಗಿದೆ. ಹಿರತ್ ವುಮೆನ್ ಸಾಮಾಜಿಕ ಕ್ಷೇತ್ರದಲ್ಲಿ ಜೀವನ ಗುಣಮಟ್ಟವನ್ನು ಮತ್ತು ಮಹಿಳೆಯ ಸ್ಥಾನವನ್ನು ಉತ್ತಮಪಡಿಸುವ ಗುರಿಯನ್ನು ಹೊಂದಿದೆ. ಶಿಶುವಿಹಾರ ಮತ್ತು ಹಿರಿಯ ನಾಗರೀಕರ ಕ್ಲಬ್‌ಗಳನ್ನು ನಡೆಸುತ್ತದೆ. ಸಾರ್ವಜನಿಕ ಜೀವನದಲ್ಲಿ ಸ್ತ್ರೀಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತದೆ.

7) ಲಿಬರಲ್ ವುಮೆನ್ಸ್ ಆರ್ಗನೈಜೇಶನ್:

ಇದರಲ್ಲಿ 5 ಸಾವಿರ ಸದಸ್ಯರಿದ್ದಾರೆ. ಉದಾರವಾದಿ ರಾಜಕೀಯ ಪಕ್ಷದ ಒಂದು ವಿಭಾಗವಾಗಿ ಕೆಲಸಮಾಡುತ್ತಿದೆ. ಇದು ಸಮುದಾಯದ ವಿವಿಧ ಶಾಖೆಗಳಲ್ಲಿ ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಜನತೆಗೆ ಸಹಾಯಮಾಡುತ್ತದೆ. ಶಿಶುವಿಹಾರ, ಸಂಕಷ್ಟದಲ್ಲಿರುವ ಹೆಣ್ಣುಮಕ್ಕಳಿಗೆ ಆಶ್ರಯ ಮನೆಗಳು, ಕೌಟುಂಬಿಕ ಹಿಂಸೆ ತಡೆಯುವ ಸಲಹಾ ಕೇಂದ್ರಗಳನ್ನು ನಡೆಸುತ್ತದೆ. ರಾಜಕೀಯ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಸ್ತ್ರೀಯರು ಹೆಚ್ಚು ಭಾಗವಹಿಸುವಂತೆ ಮಾಡುವ ಗುರಿಯನ್ನು ಇಟ್ಟುಕೊಂಡಿದೆ.

8) ಬಿನಾಯ್ ಬ್ರತ್ ವುಮೆನ್ ಇನ್ ಇಸ್ರೇಲ್

3600 ಸದಸ್ಯರಿದ್ದಾರೆ. ಬಿನಾಯ್ ಬ್ರತ್ ಇಂಟರ್‌ನ್ಯಾಷನಲ್ ಸಂಸ್ಥೆಯ ಒಂದು ಭಾಗವಾಗಿರುವ ಈ ಸಂಘ ಜಗತ್ತಿನಲ್ಲೆ ಅತ್ಯಂತ ಹಳೆಯ ಮತ್ತು ದೊಡ್ಡ ಯಹೂದಿ ಸೇವಾ ಕೇಂದ್ರವಾಗಿದೆ. ಇದೂ ಕೂಡ, ಸಾರ್ವಜನಿಕ ಕ್ಷೇತ್ರ ಮತ್ತು ವಿವಿಧ ವೃತ್ತಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಕಾರ್ಯದಲ್ಲಿ ತೊಡಗಿದೆ ಹೊಸ ವಲಸೆಗಾರರನ್ನು ಸೇರಿಸಿಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಸುಮಾರು 40 ಗೋಲ್ಡನ್ ವಾಕ್ ಕ್ಲಬ್‌ಗಳನ್ನು ಹೊಂದಿದೆ. ಸಾಮಾಜಿಕ ಅಂತರವನ್ನು ಕಡಿಮೆ ಮಾಡಲು ವಿದ್ಯಾರ್ಥಿವೇತನ ನೀಡುತ್ತದೆ. ಬುದ್ಧಿಮಾಂದ್ಯ ಶಾಲೆ ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಸಹಾಯಧನ ನೀಡುತ್ತದೆ.

9) ದ ಇಸ್ರೇಲ್ ವುಮೆನ್ ನೆಟ್‌ವರ್ಕ್ (IWN)

ಸುಮಾರು 2500 ಸದಸ್ಯರನ್ನು ಹೊಂದಿದೆ, ಮಹಿಳಾ ಹಕ್ಕುಗಳ ಪರವಾಗಿ ಹೋರಾಟ ಮಾಡುವ ಪ್ರಸಿದ್ಧ ಸಂಘಟನೆಯಾಗಿದೆ. ಇದು ಯಾವುದೇ ರಾಜಕೀಯ ಪಕ್ಷದ ಸಂಪರ್ಕವನ್ನು ಹೊಂದಿಲ್ಲ. ಸ್ತ್ರೀಯ ಪರವಾಗಿ ಲಾಬಿ ಮಾಡುವುದು ಕಾನೂನಿನ ಅರಿವು ಮೂಡಿಸುವುದು ಶಿಕ್ಷಣದ ಮೂಲಕ ಇಸ್ರೇಲಿನಲ್ಲಿ ಮಹಿಳೆಯರ ಸ್ಥಾನವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಕೆಲಸಮಾಡುತ್ತದೆ. ತುಂಬ ಆಸಕ್ತ ಹಾಗೂ ಬದ್ಧತೆಯಿರುವಂತಹ ಮಹಿಳೆಯರು ಮಾತ್ರ ಇರುವ ಸಂಘಟನೆಯಾಗಿದೆ.

10) ಹದಸ್ಸಾಹ್-ಇಸ್ರೇಲ್

2 ಸಾವಿರ ಸದಸ್ಯರಿದ್ದಾರೆ. ರಾಜಕೀಯವಲ್ಲದ ಸ್ವಯಂ ಸದಸ್ಯತ್ವವಿರುವ ಸೇವಾ ಸಂಘಟನೆಯಾಗಿದೆ. ಹದಸ್ಸಾಹ್ ಇಂಟರ್‌ನ್ಯಾಷನಲ್ ಮತ್ತು 'ಹದಸ್ಸಾಹ್ ವುಮೆನ್ಸ್ ಝಿಯೋನಿಸ್ಟ್ ಆರ್ಗನೈಜೇಶನ್ ಆಫ್ ಅಮೇರಿಕಾ'ದ ಒಂದು ಅಂಗವಾಗಿದೆ. ಹದಸ್ಸಾಹ್ ಮೆಡಿಕಲ್ ಆರ್ಗನೈಜೇಶನ್ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಬೆಂಬಲ ನೀಡುತ್ತದೆ. ಆರೋಗ್ಯ, ಶಿಕ್ಷಣ, ವಲಸೆಗಾರರನ್ನು ಸೇರಿಸಿಕೊಳ್ಳುವುದು, ಜೀವನದ ಗುಣಮಟ್ಟವನ್ನು ಉತ್ತಮಗೊಳಿಸುವುದು ಮಹಿಳೆಯರ ಅಭಿವೃದ್ಧಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ.

11) ಇಸ್ರೇಲ್ ಅಸೋಸಿಯೇಷನ್ ಆಫ್ ಯೂನಿವರ್ಸಿಟಿ ವುಮೆನ್

600 ಸದಸ್ಯರಿದ್ದಾರೆ. ಇದು 'ಇಂಟರ್ ನ್ಯಾಷನಲ್ ಫೆಡರೇಶನ್ ಆಫ್ ಯೂನಿವರ್ಸಿಟಿ ವುಮೆನ್' ಸಂಸ್ಥೆಯ ಸದಸ್ಯತ್ವನ್ನು ಹೊಂದಿದೆ. ಮಹಿಳೆ ಮತ್ತು ಹೆಣ್ಣುಮಕ್ಕಳ ಸ್ಥಾನವನ್ನು ಉತ್ತಮಪಡಿಸುವುದು ಮಾನವ ಹಕ್ಕುಗಳ ರಕ್ಷಣೆ, ಜಗತ್ತಿನಾದ್ಯಾಂತ ವಿಶ್ವವಿದ್ಯಾನಿಲಯಗಳಲ್ಲಿರುವ ಮಹಿಳೆಯರ ನಡುವೆ ಸ್ನೇಹ ಮತ್ತು ಸಾಮರಸ್ಯ ತಂದು ಶಾಂತಿ ಸ್ಥಾಪನೆಗೆ ಪ್ರಯತ್ನಿಸುತ್ತಿದೆ.

12) ಸೋರೋ ಫೆಮಿನಿಸ್ಟ್ ಇಂಟರ್ ನ್ಯಾಷನಲ್ ಆಫ್ ಇಸ್ರೇಲ್

500 ಸದಸ್ಯರಿದ್ದಾರೆ, ಉನ್ನತ ನೈತಿಕ ಮೌಲ್ಯ; ಮಾನವ ಹಕ್ಕುಗಳ, ಅಂತರ ರಾಷ್ಟ್ರೀಯ ಸಾಮರಸ್ಯ ಮತ್ತು ಸ್ನೇಹವನ್ನು ಬೆಳೆಸುವ ನಿಟ್ಟಿನಲ್ಲಿ ಕೆಲಸಮಾಡುತ್ತದೆ.

13) ದಿ ಫೆಮಿನಿಸ್ಟ್ ಕನೆಕ್ಷನ್

ವಿವಿಧ ಸ್ತ್ರೀವಾದಿ ಗುಂಪುಗಳನ್ನು ಸಂಘಟಿಸುವ ಸಂಘವಾಗಿದೆ. ಯಾವುದೇ ಒಬ್ಬ ಮಹಿಳೆ ಅಥವಾ ಅನೇಕ ಮಹಿಳೆಯರು ತುಳಿತಕ್ಕೊಳಗಾದರೆ ಅವರನ್ನು ಪ್ರತಿನಿಧಿಸುವ ಮತ್ತು ಅವರ ಆಸಕ್ತಿಗಳನ್ನು ಎತ್ತಿ ಹಿಡಿಯುವ ಹೋರಾಟವನ್ನು ಮಾಡುತ್ತದೆ. ಸಂಕಷ್ಟಕ್ಕೀಡಾದ ಮಹಿಳೆಯರು ತಮ್ಮ ಜೀವನವನ್ನು ತಾವೇ ರೂಪಿಸಿಕೊಳ್ಳುವುದಕ್ಕೆ, ತಾರತಮ್ಯ ಮತ್ತು ದೌರ್ಜನ್ಯದ ವಿರುದ್ಧ ಹೋರಾಡಲು ಬೇಕಾದ ಎಲ್ಲಾ ರೀತಿಯ ಸಹಾಯವನ್ನು ನೀಡುತ್ತದೆ. ಈ ಸಂಘಟನೆ ಎಲ್ಲಾ ಮಹಿಳೆಯರಿಗೂ ಮುಕ್ತವಾಗಿದೆ. ಇಲ್ಲಿ ರಾಷ್ಟ್ರೀಯತೆ, ನಂಬಿಕೆ, ಜನಾಂಗ, ಕುಲ, ವೃತ್ತಿ, ಆರೋಗ್ಯ ಸ್ಥಿತಿ ಮತ್ತು ವಯಸ್ಸಿನ ಭೇದವಿಲ್ಲದೆ ಎಲ್ಲಾ ಮಹಿಳೆಯರನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ.

ಇತರ ಸಂಘಟನೆಗಳು

ಮಹಿಳೆಯರ ಕಲ್ಯಾಣ, ಅಭಿವೃದ್ಧಿ, ಲಿಂಗ ಸಮಾನತೆ ಸಶಕ್ತೀಕರಣ ಮುಂತಾದ ಗುರಿಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿರುವ ಇತರ ಸ್ಥಳೀಯ ಸಂಘಟನೆಗಳೆಂದರೆ

- ವುಮೆನ್ ಟು ವುಮೆನ್
- ವುಮೆನ್ ಏಗೇನ್ಸ್ಟ್ ಡಿಸ್ಕ್ರಿಮಿನೇಟರಿ ಅಡ್ವರ್ಟೈಸಿಂಗ್
- ದಿ ಇಸ್ರೇಲ್ ಚೈಲ್ಡ್ ಬರ್ತ ಎಜುಕೇಶನ್ ಟ್ರಸ್ಟ್
- ದಿ ವುಮೆನ್ ಹೆಲ್ಪ್ ಗ್ರೂಪ್
- ಅಸೋಸಿಯೇಷನ್ ಆಫ್ ರೇಪ್ ಕ್ರೈಸಿಸ್ ಸೆಂಟರ್ಸ್ ಇನ್ ಇಸ್ರೇಲ್
- ಲಾಯಲ್ಟಿ ಎಂಡ್ ಸಿಸ್ಟರ್ ಹುಡ್ ಎಂಡ್ ಗ ಷರ್ - ಈ ಸಂಘಟನೆ ಅರಬ್ ಮತ್ತು ಯಹೂದಿ ಮಹಿಳೆಯರ ನಡುವೆ ಸಹಕಾರ ಮತ್ತು ಸಾಮರಸ್ಯ ತರುವ ನಿಟ್ಟಿನಲ್ಲಿ ಕೆಲಸಮಾಡುತ್ತದೆ.

ಹೀಗೆ ಇಸ್ರೇಲಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಪರವಾಗಿ ಕೆಲಸ ಮಾಡುತ್ತಿರುವ ಸಂಘಟನೆಗಳು ಅಧಿಕ ಸಂಖ್ಯೆಯಲ್ಲಿವೆ. ಕೆಲವು ಧಾರ್ಮಿಕ ಹಾಗೂ ಕಟ್ಟುಪಾಡುಗಳು ಮಹಿಳೆಯರ ಅಭಿವೃದ್ಧಿಯಲ್ಲಿ ಅಡ್ಡಿಗಳಾಗಿದ್ದರೂ, ಸ್ತ್ರೀಯರಲ್ಲಿ ಅರಿವು ಮೂಡಿಸುವುದು, ಶಿಕ್ಷಣ ಮತ್ತು ಉದ್ಯೋಗ ಮಟ್ಟವನ್ನು ಹೆಚ್ಚಿಸುವುದು, ಉದ್ಯೋಗಸ್ಥ ಮಹಿಳೆಯರ ಅನುಕೂಲಕ್ಕಾಗಿ ಡೇ ಕೇರ್ ಸೆಂಟರ್‌ಗಳನ್ನು ಸ್ಥಾಪಿಸುವುದು, ಮಹಿಳೆಯರನ್ನು ಸಂಘಟಿಸುವುದು, ಮಹಿಳೆಯರ ಹಕ್ಕುಗಳ ರಕ್ಷಣೆ, ಸಾರ್ವಜನಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಅವರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು, ಸಂಕಷ್ಟದಲ್ಲಿರುವ ಮಹಿಳೆಯರಿಗೆ ಆಶ್ರಯ ನೀಡುವಂತಹ ಕೆಲಸಗಳಲ್ಲಿ ಮಹಿಳಾ ಸಂಘಟನೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಮಹಿಳೆಯರ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 50ಕ್ಕಿಂತ ಹೆಚ್ಚಿನ ಮಹಿಳೆಯರು ಒಂದಲ್ಲ ಒಂದು ಸಂಘಟನೆಯ ಸದಸ್ಯರಾಗಿರುವುದು ಕಂಡುಬರುತ್ತದೆ. ಒಟ್ಟಿನಲ್ಲಿ ಮಹಿಳಾ ಸಂಘಟನೆಯು ಇಸ್ರೇಲಿ ಮಹಿಳೆಯರ ಜೀವನದಲ್ಲಿ ಅವಿಭಾಜ್ಯ ಅಂಗವಾಗಿದೆ. ಸಂಘಟನೆಯ ಶಕ್ತಿ ಎಷ್ಟು ಎಂದು ತೋರಿಸಿಕೊಡುವಲ್ಲಿ ಇಸ್ರೇಲಿನ ಮಹಿಳಾ ಸಂಘಟನೆಗಳು ನಮಗೆ ಮಾದರಿಯಾಗಿವೆ.

ಮಾನಸದ ಪ್ರಕಟಣೆ ಮಾನಸದ ಓದುಗರ ಆರ್ಥಿಕ ನೆರವನ್ನು ಅವಲಂಬಿಸಿವೆ. ಓದುಗರು ಚಂದಾ ನವೀಕರಣದ ಸೂಚನೆ ಬಂದ ಕೂಡಲೇ ಚಂದಾ ನವೀಕರಿಸಿ ಸಹಕರಿಸಬೇಕೆಂದು ಕೋರುತ್ತೇವೆ.

ಸಂ. ಮಂಡಳಿ

ಭೂಮಿಗಾಥೆ

ಫೋನ್ ಒಂದೇ ಸಮನೆ ಟ್ರಿನ್‌ಗುಟ್ಟುತ್ತಿತ್ತು. ಹೋಗಿ ರಿಸೀವರನ್ನೆತ್ತಿಕೊಂಡೆ.

"ಹಲೋ"

"ಹಲೋ ಡಾಕ್ಟ್ರೇ, ನಾನು ರಮಾ ಮಾತಾಡ್ತಿರೋದು, ನಾನು ಒಂದು ತೊಂದರೆಯಲ್ಲಿ ಸಿಕ್ಕಿಕೊಂಡಿದೀನಿ. ನೀವೇ ನನಗೆ ಪರಿಹಾರ ಸೂಚಿಸಬೇಕು ಈಗ ನಿಮ್ಮ ಮನೆಗೆ ಬರಬೇಕೆಂದುಕೊಂಡಿದೀನಿ ಬರಲಾ?"

"ಏನು ಅಂತಹ ಅವಸರ? ಸಂಜೆ ಕ್ಲಿನಿಕ್‌ಗೆ ಬಂದುಬಿಡು"

"ಇಲ್ಲ ಡಾಕ್ಟ್ರೇ, ನಿಮ್ಮ ಬಳಿ ಹೇಳುವವರೆಗೂ ನನಗೆ ಸಮಾಧಾನವಿಲ್ಲ ಈಗಲೇ ಬರ್‍ತೀನಿ."

"ಸರಿ" ಎಂದು ರಿಸೀವರ್ ಇಟ್ಟೆ.

ರಮಾಳದು ಸುಂದರ ಪುಟ್ಟ ಸಂಸಾರ. ಗಂಡನಿಗೆ ಉತ್ತಮ ಸಂಬಳದ ಸರ್ಕಾರಿ ಕೆಲಸವಿದೆ. ಮುದ್ದಾದ ಎರಡು ಮಕ್ಕಳು, ಇವಳಿಗೇನಂತಹ ತೊಂದರೆ ಬಂದಿರೋದು ಎಂದು ಯೋಚಿಸುತ್ತಿದ್ದೆ. ನಾನು ಊಟ ಮುಗಿಸಿ ಕೈ ತೊಳೆಯುವಷ್ಟರಲ್ಲಿ ರಮಾ ಬಂದಳು. ಅತ್ತೂ ಅತ್ತೂ ಕಣ್ಣು ಊದಿಕೊಂಡಿದ್ದವು.

"ಇದೇನು ರಮಾ ನಿನ್ನ ಕಣ್ಣಲ್ಲಿ ನೀರು?"

"ನನಗೆ ಹೇಳಿಕೊಳ್ಳಲು ತುಂಬ ನಾಚಿಕೆಯೆನಿಸುತ್ತದೆ. ಆದರೂ ವಿಧಿಯಿಲ್ಲ. ಹೇಳಲೇಬೇಕು. ನನ್ನ ಗಂಡನಿಗೆ ಇನ್ನೊಬ್ಬ ಹುಡುಗಿಯೊಂದಿಗೆ ಸಂಬಂಧವಿದೆ. ನಾನು ಹೆರಿಗೆಗೆಂದು ತವರಿಗೆ ಹೋದಾಗ ಅವಳು ಇವರ ಬಳಿ ಪಾಠ ಹೇಳಿಸಿಕೊಳ್ಳಲು ಬರುತ್ತಿದ್ದಳಂತೆ. ಅವಳು ನನ್ನ ಗಂಡನಿಗೆ ಏನು ಮೋಡಿ ಮಾಡಿಬಿಟ್ಟಿದ್ದಾಳೋ ಗೊತ್ತಿಲ್ಲ. ನನಗೆಂತಹ ಸೀರೆ ತರ್‍ತಾರೋ ಅವಳಿಗೂ ಅಂತಹುದನ್ನೇ ತರ್‍ತಾರೆ, ಹೊರಗಡೆಯೂ ಅವಳೊಂದಿಗೆ ಸುತ್ತಾಡ್ತಾರೆ. ಅವಳನ್ನು ಮದುವೆಯಾಗುತ್ತೇನೆಂದು ಬೇರೆ ಹಠ ಹಿಡಿದಿದ್ದಾರೆ. ನನ್ನ ಹಾಗೂ ಮಕ್ಕಳ ಗತಿಯೇನು? ಎರಡು ಮದುವೆಯಾದರೆ ಇವರ ಕೆಲಸ ಹೋಗುವುದಿಲ್ಲವೇ? ಇವರ ಜೊತೆಗೆ ಜಗಳ ಕಾದೂ ಕಾದೂ ಸಾಕಾಗಿ ನಾನು ಅತ್ತೆ, ಮಾವ, ಅಪ್ಪ, ಅಮ್ಮ ಎಲ್ಲರಿಗೂ ಪತ್ರ ಬರೆದು ಕರೆಸಿದೆ. ಅವರೆಲ್ಲ ಬಂದು ಬೈದು ಬುದ್ಧಿ ಹೇಳಿದ ಮೇಲೆ ತಪ್ಪಾಯಿತೆಂದು ಒಪ್ಪಿಕೊಂಡು ಅವಳನ್ನು ಮರೆತುಬಿಡುತ್ತೇನೆಂದು ಹೇಳಿದ್ದರು. ಹಾಗೆಯೇ ಒಂದು ತಿಂಗಳಿಂದ ದೂರವೂ ಇದ್ದರು"

"ಆಯ್ತಲ್ಲ, ಮತ್ತೇಕೆ ಅಳ್ತೀಯ? ದೂರವಾದ ಮೇಲೆ ಮತ್ತೇನು?"

"ನಿಜವಾದ ತೊಂದರೆ ಶುರುವಾಗಿರೋದೇ ಈಗ ಡಾಕ್ಟ್ರೇ, ಅವಳು ಮೊನ್ನೆ ನಮ್ಮ ಮನೆಗೆ ಬಂದಿದ್ದಳು. ನಮ್ಮವರ ಪಾಪದ ಫಲ ಅವಳ ಹೊಟ್ಟೆಯಲ್ಲಿ ಚಿಗುರಿದೆ. ಅವಳನ್ನು ನೋಡಿದ ಮೇಲೆ, ಅವಳ ಮಾತುಗಳನ್ನು ಕೇಳಿದ ಮೇಲೆ ನಮ್ಮವರ ಮನಸ್ಸು ಮೇಣದಂತೆ ಕರಗಿ ಮತ್ತೆ ಅವಳನ್ನು ಮದುವೆಯಾಗುವ ತೀರ್ಮಾನಕ್ಕೆ ಬಂದಿದ್ದಾರೆ. ಈ ಮದುವೆಯೇನಾದ್ರೂ ನಡೆದರೆ ನನ್ನ ಬದುಕು ಮುಗಿದಂತೆಯೇ ಸರಿ. ಅದಕ್ಕೆ ನಾನೊಂದು ನಿರ್ಧಾರಕ್ಕೆ ಬಂದಿದೀನಿ. ಅವಳಿಗೆ ಗರ್ಭಪಾತ ಮಾಡಿಸಿದರೆ ನಂತರ ಇಬ್ಬರನ್ನು ದೂರ ಮಾಡಬಹುದು. ಇದಕ್ಕೆ ನೀವೇ ಏನಾದ್ರೂ ಸಹಾಯ ಮಾಡಲೇಬೇಕು. ಸಂಜೆ ಅವಳನ್ನು ಕರೆದು ಕೊಂಡು ಬರುತ್ತೇನೆ. ದಯವಿಟ್ಟು ನೀವೇ ಅವಳ ಬಳಿ ಮಾತಾಡಿ ನನ್ನ ಜೀವನಕ್ಕೊಂದು ದಾರಿ ಮಾಡಿ. ಎಷ್ಟು ಹಣ ಖರ್ಚಾದ್ರೂ ಪರವಾಗಿಲ್ಲ, ಯಾವುದಾದರೂ ನಿಮ್ಮ ಪರಿಚಯದ ಆಸ್ಪತ್ರೆಯಲ್ಲಿ ಮಾಡಿಸಿ ನನ್ನ ಮರ್ಯಾದೆ ಉಳಿದರೆ ಸಾಕು"

ಎಂತಹ ವಿಚಿತ್ರವಲ್ಲವೇ? ಇದು ಹೆಂಡತಿಯೇ ಗಂಡನ......ಗೆ ಅಬಾರ್ಷನ್ ಮಾಡಿಸಲು ಮುಂದೆ ಬಂದಿದ್ದಾಳೆ. ಇಬ್ಬರೂ ಮಹಿಳೆಯರು ಒಬ್ಬನಿಂದಲೇ ಕಷ್ಟಕ್ಕೊಳಗಾದವರು, ಇವಳೇನೋ ಸದ್ಯದ ಪರಿಸ್ಥಿತಿಯಿಂದ ನಿವಾರಿಸಬಹುದು. ಆದರೆ ಆ ಹುಡುಗಿಯ ಗತಿ?

"ರಮಾ, ಅಬಾರ್ಷನ್ ಮಾಡಿಸೋದು ಒಳ್ಳೆಯದಲ್ಲ. ಮುಂದೆ ಆ ಹುಡುಗಿಯ ಆರೋಗ್ಯಕ್ಕೆ ತೊಂದರೆಯಾಗಬಹುದು ಅಲ್ಲವೇ? ನಾನು ಅಬಾರ್ಷನ್‌ಗೆ ವಿರೋಧಿ ಎಂದು ನಿನಗೆ ಗೊತ್ತಿಲ್ಲವೇ?"

"ನೀವು ಇದಕ್ಕೆ ಒಪ್ಪುವುದಿಲ್ಲವೆಂದು ನನಗೆ ಗೊತ್ತು. ಆದರೆ ನೀವು ಈಗ ನನಗೆ ಸಹಾಯ ಮಾಡಲೇಬೇಕು. ಇದೊಂದು ಉಪಕಾರ ಮಾಡಿಧರೆ ನಿಮ್ಮನ್ನು ಜನ್ಮ ಜನ್ಮಾಂತರದಲ್ಲಿಯೂ ನಾನು ಮರೆಯುವುದಿಲ್ಲ. ಮೊದಲು ಆ ಹುಡುಗಿಯ ಬಳಿ ನೀವು ಮಾತಾಡಬೇಕು. "ನೀನು ಮೊದಲು ಆ ಹುಡುಗಿಯನ್ನು ಕರೆದುಕೊಂಡು ಬಾ" ಎಂದು ಅವಳನ್ನು ಕಳಿಸಿದೆ.

ಈ ಹುಡುಗಿಯರು ಅದೆಷ್ಟು ಬೇಗ ಗಂಡಿನ ಮಾತಿಗೆ ಮರುಳಾಗಿ ಹಿಂದೆ ಮುಂದೆ ಯೋಚಿಸದೇ ತಮ್ಮದೆಲ್ಲವನ್ನು ಅರ್ಪಿಸುತ್ತಾರಲ್ಲ. ಮದುವೆಯಾಗಿ ಮಕ್ಕಳಿವೆ ಎಂದು ತಿಳಿದೂ

ಅವನಿಂದ ಬಸುರಿಯಾಗಿರುವಳಲ್ಲ ತನ್ನ ಜೀವನ ತಾನೇ ಹಾಳು ಮಾಡಿಕೊಳ್ಳುತ್ತಿದ್ದಾಳಲ್ಲ.

ಸಾಯಂಕಾಲ ರಮಾ ಆ ಹುಡುಗಿಯನ್ನು ಕರೆತಂದಾಗ ರಮಾಳನ್ನು ಹೊರಗೇ ಕುಳಿತುಕೊಳ್ಳಲು ಹೇಳಿ ಆ ಹುಡುಗಿಯನ್ನು ಒಳಗೆ ಕರೆದೆ. ಇನ್ನು 17 ತುಂಬಿರದ ಆ ಹುಡುಗಿ ಸುಮ್ಮನೆ ನಿಂತಳು

"ಕುಳಿತ್ಕೊ, ನಿನ್ನ ಹೆಸರೇನು?" ಎಂದು ಕೇಳಿದ ತಕ್ಷಣವೇ ಅಳಲು ಪ್ರಾರಂಭಿಸಿದಳು.

"ಯಾಕಳ್ತೀಯಾ ಸುಮ್ನಿರು, ಈಗ ಅತ್ತು ಏನು ಪ್ರಯೋಜನ?"

"ನನಗೇನೂ ಗೊತ್ತಿಲ್ಲ, ಮೋಹನ್ ತಮ್ಮ ಹೆಂಡತಿಗೆ ಯಾವುದೇ ಕಾಯಿಲೆಯಿದೆಯೆಂದು ಹೇಳಿ ನನ್ನನ್ನೇ ಮದುವೆ ಯಾಗ್ತೀನಿ ಅಂದ್ರು. ಅದಕ್ಕೆ ನಾನು......"

"ಎಂತಹ ಪೆದ್ದು ಹುಡುಗಿ ನೀನು? ರಮಾಳನ್ನು ನೋಡಿದೀಯಲ್ಲ. ಅವಳಿಗೆ ಕಾಯಿಲೆಯಿರುವ ತರಹ ಕಾಣಿಸ್ತಾಳಾ? ನೀನು ಚಿಕ್ಕ ಹುಡುಗಿ. ಅವನು ಬಣ್ಣದ ಬಟ್ಟೆ ತೊಡಿಸಿ ಜೊತೆಯಲ್ಲಿ ಸುತ್ತಾಡಿಸಿದ್ದಕ್ಕೇ ಎಲ್ಲವನ್ನು ಅವನಿಗೆ ಧಾರೆಯೆರೆದು ಬಿಟ್ಟೆಯಾ? ಅವನಿಗೋ ಈಗ 40 ವರ್ಷ. ನಿನಗಿನ್ನು 17 ವರ್ಷ. ನೀನು ಅವನ ಮಾತನ್ನು ನಂಬಿ ಮದುವೆಯಾದ್ರೆ ನಿನ್ನ ಭವಿಷ್ಯ ಏನಾಗುತ್ತೆ ಯೋಚಿಸು. ಅಕಸ್ಮಾತ್ ನೀನು ಅವನನ್ನೇ ಮದುವೆಯಾದ್ರೂ ಹೆಂಡತಿಯ ಸ್ಥಾನ, ಮಾನ ಸಿಗುವುದಿಲ್ಲ. ನೀನು ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಮುಂದಿನ ನಿನ್ನ ಜೀವನವನ್ನು ಬಂಗಾರ ಮಾಡಿಕೋ, ಅವನಿಗೆ ನಿನ್ನ ಮೇಲಿರುವುದು 'ಪ್ರೇಮವಲ್ಲ' ಕೇವಲ 'ಕಾಮ' ಅದಕ್ಕೋಸ್ಕರ ನಿನ್ನ ಇಡೀ ಬದುಕನ್ನು ಕತ್ತಲಾಗಿಸಿಕೊಳ್ಳಬೇಡ"

"ಡಾಕ್ಟ್ರೆ, ನಾನು ಚೆನ್ನಾಗಿ ಓದಿ ವಿದ್ಯಾವಂತಳಾಗಬೇಕು. ಮದುವೇನೂ ಬೇಡ, ಏನೂ ಬೇಡ ಆದರೆ....ಆದರೆ" ಎಂದು ತಲೆತಗ್ಗಿಸಿ ನಿಂತಳು.

"ಏನು ಆದರೆ"

"ನಾನು ಎರಡು ತಿಂಗಳಿನಿಂದ ಮುಟ್ಟಾಗಿಲ್ಲ. ಮೋಹನ್ ಯಾವುದೋ ಮಾತ್ರೆ ತಂದುಕೊಟ್ಟರು. ಅದನ್ನು ತೆಗೆದುಕೊಂಡರೂ ಆಗಲಿಲ್ಲ. ಸದ್ಯದ ಪರಿಸ್ಥಿತಿಯಿಂದ ನನ್ನನ್ನು ಪಾರು ಮಾಡಿ. ನಿಮ್ಮ ಕಾಲು ಹಿಡಿದು ಬೇಡಿಕೊಳ್ಳುತ್ತೇನೆ" ಹಾಗೆಯೇ ಮುಂದೆ ಬಾಗಿ ಕಾಲು ಹಿಡಿದಳು.

"ಅದೆಲ್ಲ ಏನೂ ಬೇಡ ನಿಮ್ಮ ತಾಯಿಯನ್ನು ಕರೆದುಕೊಂಡು ಬಾ. ಅವರಿಗೆ ವಿಷಯ ತಿಳಿಸೋಣ"

"ಅಯ್ಯೋ ಬೇಡ ಡಾಕ್ಟ್ರೇ, ಅವರ ಬಳಿ ಹೇಳಲು ನನಗೆ ಭಯ"

"ನಿನ್ನ ಮೇಲಿನ ಪ್ರೀತಿಯಿಂದ ಇಷ್ಟೊಂದು ಮುಂದುವರೆಯಲು ಬಿಟ್ಟಿದ್ದರಿಂದ ಈಗೇನಾಗಿದೆ ಎಂದು ಅವರು ಬೈಯಲಿ" ಖಾರವಾಗಿ ನುಡಿದೆ. ನಂತರ ಅವರ ತಾಯಿ ವಿಷಯ ತಿಳಿದು ಗೋಳಾಡಿದರು. ಆಸ್ಪತ್ರೆಗೆ ಕಳಿಸಿ ಅಬಾರ್ಷನ್ ಮಾಡಿಸಿದ್ದಾಯಿತು. ರಮಾಳೇ ಎಲ್ಲದಕ್ಕೂ ಹಣ ಖರ್ಚುಮಾಡಿ ಆಸ್ಪತ್ರೆಯಿಂದ ಅವಳು ಮನೆಗೆ ಹೋಗುವವರೆಗೆ ಕಾಳಜಿಯಿಂದ ಆ ಹುಡುಗಿಯನ್ನು ನೋಡಿಕೊಂಡಳು. ಇಲ್ಲಿ ಮೂರು ಜನರ ವ್ಯಥೆಯಿದೆಯಲ್ಲವೇ? ಆ ಹುಡುಗಿಗೆ ಜೀವನಾದ್ಯಂತ ಇದೊಂದು ಕೆಟ್ಟ ಅನುಭವವಾಗುಳಿಯುವುದಿಲ್ಲವೇ? ರಮಾಗೂ ಗಂಡನ ಮೇಲೆ ಮೊದಲಿನ 'ಪ್ರೀತಿ' ಹಾಗೆಯೇ ಇರಲು ಸಾಧ್ಯವೇ? ಆ ಹುಡುಗಿಯ ತಾಯಿಗೂ ಜೀವನದ ಕೊನೆಯುಸಿರಿನವರೆಗೂ ಚಿಂತೆ ಇದ್ದೇ ಇರುತ್ತದೆ. ಹೆಣ್ಣಿನ ದುರ್ಬಲತೆ ಅರಿತ ಗಂಡು ಹೇಗೆ ಆಟವಾಡುತ್ತಾನೆ ಮತ್ತು ವಂಚಿಸುತ್ತಾನೆ ನೋಡಿ; ಹುಡುಗಿಯರು ಗಂಡಿನ ಕಾಮದ ಕಣ್ಣಿಗೆ ಬಲಿಯಾಗದಂತೆ ಎಚ್ಚರ ವಹಿಸಬೇಕಲ್ಲವೇ?


ಡಾ|| ವಸುಂಧರಾ ಭೂಪತಿ, ಬೆಂಗಳೂರು

ಮಹಿಳೆಯರಿಗೆ ಸಂಬಂಧಪಟ್ಟ, ಹೆಚ್ಚು ಪ್ರಸ್ತುತವಾದ ವಿಷಯಗಳನ್ನು ಕುರಿತು ಮಾನಸ ಪತ್ರಿಕೆಯ ಮೂಲಕ ಓದುಗರೊಂದಿಗೆ ಸಂವಾದ ನಡೆಸುವ ಯೋಜನೆಯನ್ನು ಪತ್ರಿಕೆ ರೂಪಿಸಿದೆ. ಮಹಿಳೆಯರ ಬದುಕಿಗೆ ನೇರವಾಗಿ ಸಂಬಂಧಿಸಿದ ದೈನಂದಿನ ಸಮಸ್ಯೆಗಳನ್ನು ಸೈದ್ಧಾಂತಿಕ ನೆಲೆಯನ್ನು ರೂಪಿಸುವುದು ಈ ಆಲೋಚನೆಯ ಉದ್ದೇಶ. ಈ ಬಾರಿ ಚರ್ಚೆ ಆರಿಸಿಕೊಂಡ ವಿಷಯ "ವಿವಾಹ ಮಹಿಳೆಗೆ ಭದ್ರತೆಯನ್ನು ನೀಡುತ್ತಿದೆಯೆ?" ಈ ವಿಷಯ ಕುರಿತು ಓದುಗರು ತಮ್ಮ ವಿಚಾರಗಳನ್ನು [ನಿಮ್ಮ ಕೈಬರಹದಲ್ಲಿ ಎರಡು ಪುಟಗಳಿಗೆ ಮೀರದಂತೆ] ಬರೆದು ಕಳಿಸುವುದರ ಮೂಲಕ ಚರ್ಚೆಯಲ್ಲಿ ಭಾಗವಹಿಸಿ, ಅರ್ಥಪೂರ್ಣಗೊಳಿಸಬೇಕೆಂದು ಕೋರುತ್ತೇವೆ.

- *ಸಂ. ಮಂಡಳಿ*

ಬಮಿಯಾನ್ ಬುದ್ಧ ಮತ್ತು ಆಫ್ಘಾನ್ ಯುದ್ಧ

ರಂಜಾನ್‌ದರ್ಗಾ



1

ಹೀನಯಾನ, ವಜ್ರಯಾನ, ಮಹಾಯಾನಗಳ ಮಧ್ಯೆಯೂ
ಮಂದಸ್ಮಿತ ಬಮಿಯಾನ್ ಬುದ್ಧ ಯುಗಗಳಿಂದ ನಿಂತೇ ಇದ್ದ

ಇಲ್ಲಿ ಆರ್ಯಾವರ್ತದಲ್ಲಿ 25 ಶತಕಗಳ ಹಿಂದೆ ಭಗವಾನ ಬುದ್ಧ
ಮೌನನೋಟದಿಂದಲೇ ಅಹಂಕಾರವನ್ನು ಪುಡಿಪುಡಿ ಮಾಡಿದ್ದ

ಅಲ್ಲಿ ಮತಾಂಧರ ದುಷ್ಟನೋಟಕ್ಕೆ, ಮದ್ದಿನ ಸ್ಫೋಟಕ್ಕೆ
ನಗುನಗುತ್ತಲೇ ಪುಡಿಪುಡಿಯಾಗಿ ಬಿದ್ದ, ಜನಮನದಲ್ಲಿ ಎದ್ದ

2

ನೆಲದಲ್ಲಿ ತಾಲಿಬಾನ್ ದ್ವೇಷ, ಬಾನಲ್ಲಿ ಅಮೆರಿಕನ್
ರೋಷ
ಯುದ್ಧಕ್ಕೆ ಮೊದಲೇ ಮಣ್ಣಾಗಿ ಹೋದ ಬಮಿಯಾನ್ ಬುದ್ಧ

ಆಗಬಹುದು ಅದೆಷ್ಟೋ ಸಲ ಈ ಭೂಮಿಯ ಮೇಲೆ ಯುದ್ಧ;
ಸದಾ ಅಮರನಾಗಿ ಅಂತಃಕರಣದಲ್ಲಿ ನಿಂತೇ ಇರುತ್ತಾನೆ ಬುದ್ಧ

ಕೇಳಿ, ಬುದ್ಧನಲ್ಲಿ ಸೋಲೆಂಬುದಿಲ್ಲ,
ಯುದ್ಧದಲ್ಲಿ ಗೆಲುವೆಂಬುದಿಲ್ಲ
ಬಮಿಯಾನದ ಭಗವಾನ ಮತ್ತೆ
ಮಣ್ಣಲ್ಲಿ ಹೂವಾಗಿ ಅರಳಿದನಲ್ಲ!

3

ಎಲ್ಲ ತೊರೆದಿದ್ದ ಬುದ್ಧ ಸುವಾಸನೆಯಾಗಿ ವಾಸವಾದ ಮನದಲ್ಲೇ
ಆಫ್ಘಾನ್ ವೃದ್ಧನೊಬ್ಬ ಅರಿಯದೆ ಸಾಗಿದ್ದ ಬುದ್ಧನ ದಾರಿಯಲ್ಲೇ

ಕೇಳಿದವರಿಗೆ ಮಾತ್ರ ಹೇಳಿದ: ಲಾಡೆನ್ ಬೇಡ, ಬುಷ್ ಬೇಡ,
ಭಯೋತ್ಪಾದಕರೂ ಬೇಡ, ಯುದ್ಧೋನ್ಮಾದಿಗಳೂ ಬೇಡ
ನನಗೆ ಬೇಕು ಶಾಂತಿ, ಲೋಕದ ಜೀವಿಗಳಿಗೆಲ್ಲ ಬೇಕು ಶಾಂತಿ
ವಿಶ್ವದೆಲ್ಲೆಡೆಯ ಒಳ್ಳೆಯದೆಲ್ಲರ ಸೃಷ್ಟಿಗೆ ಮೂಲ ಕೇವಲ ಶಾಂತಿ.

ಶಾಂತಿ ಆವರಿಸಿದಾಗ ಹೂಗಳರಳುವವು, ಕಾಯಿ ಹಣ್ಣಾಗುವವು
ಹಿಮಶಿಖರದ ಹಿಂದುಕುಷ್ ಪರ್ವತಗಳೆಲ್ಲ ಮಂದಹಾಸ ಬೀರುವವು

ಶಾಂತಿ ಎದ್ದು ನಿಂತಾಗ ನಾವು ಹಾಯಾಗಿ ಕುಳಿತು ಉಣಬಹುದು
ಹಾಲುಗಲ್ಲದ ಹಸುಗೂಸಿನ ನಗೆಯ ವಿಸ್ತಾರವನ್ನೂ ಅಳೆಯ ಬಹುದು.

ಶಾಂತಿ ಇದ್ದಾಗ ನಾವು ಅಲೆಯಬೇಕಿಲ್ಲ, ಹೊಸ ನೆಲೆಯೂ ಬೇಕಿಲ್ಲ
ಶಾಂತಿ ಎಲ್ಲವನ್ನೂ ತರುವುದು; ಯುದ್ಧದಲ್ಲಿ ಯಾರಿಗೂ ಸುಖವಿಲ್ಲ.

5

ಬಾಂಬಿಗೆ ಭಯವಿದೆ ಶಾಂತಿಯ ಮುಂದೆ ಸಿಡಿಯಲು,
ಜೀವ ಹಿಡಿಯಲು
ಏಳಬೇಕಿಲ್ಲ ನಿರಾಶ್ರಿತರ ತಾಣಗಳು;
ಅವಕಾಶವಿಲ್ಲ ಮನೆಗಳ ಬೀಳಿಸಲು

ನಾವು ಬದುಕ ಬಯಸಿದ್ದೇವೆ ನೆನಪುಗಳೊಂದಿಗೆ,
ಸುಖ ದುಃಖಗಳೊಂದಿಗೆ
ಹಾಡುವ ಹಕ್ಕಿಗಳೊಂದಿಗೆ
ಭೂಮಿಯೊಂದಿಗೆ-ಜೀವಕಾಯಿಯೊಂದಿಗೆ

ಶ್ರೀಮನ್ನಾರಾಯಣನ ಕ್ಯಾಲೆಂಡರ್

ಜಿ. ವಿ. ವೇದವಲ್ಲಿ

ಕಮಲಾಬಾಯಿ ತುಂಬಾ ಚುರುಕಾದ ಹೆಂಗಸು. ಕಷ್ಟಜೀವಿ. ಹತ್ತನೆಯ ತರಗತಿಯವರೆಗೆ ಓದಿದ ಆಕೆ ಪ್ರತಿಯೊಂದು ಕೆಲಸದಲ್ಲೂ ಅಚ್ಚುಕಟ್ಟು ಆಕೆಯ ಗಂಡ ಒಂದು ರೀತಿಯಲ್ಲಿ ಹುಂಬ. ಕಷ್ಟಪಟ್ಟು ದುಡಿಯದ ಆತ ಮೈಗಳ್ಳ. ಏನಾದರೂ ಒಂದು ಸುಳ್ಳು ಹೇಳಿಕೊಂಡೇ ಜೀವನ ನಡೆಸುತ್ತಿದ್ದ.

ಕಮಲಾಬಾಯಿ ಸದಾ ನಗುನಗುತ್ತಾ, ಅಕ್ಕಪಕ್ಕದವರೊಡನೆ ಮಾತನಾಡಿಕೊಂಡು ಮನೆಗೆಲಸದ ಜೊತೆಯಲ್ಲಿ ನಾಲ್ಕು ಕಾಸು ಸಂಪಾದನೆ ಮಾಡುವತ್ತ ಸದಾ ಯೋಚಿಸುತ್ತಿದ್ದವಳು. ಬೆಳಿಗ್ಗೆ ಆರು ಗಂಟೆಗೆ ಎದ್ದರೆ ರಾತ್ರಿ ಹನ್ನೆರಡಾದರೂ ಸರಿ ದುಡಿಯುವ ಮಹಿಳೆ. ಎರಡು ಮಕ್ಕಳ ಸಂಸಾರ ತೂಗಬೇಕಾದುದರಿಂದ ಗಂಡನ ಸಂಪಾದನೆಯನ್ನೇ ನೆಚ್ಚಿಕೊಂಡಿರಲು ಸಾಧ್ಯವಿಲ್ಲ. ಮನೆಗೆಲಸ ಮುಗಿಸಿಕೊಂಡು ಮನೆಯಲ್ಲಿ ನಾಲ್ಕು ಕಾಸು ಸಂಪಾದನೆ ಮಾಡಲು ಹಪ್ಪಳವನ್ನೇಕೆ ಉಜ್ಜಬಾರದೆಂದು ಮನೆಯಲ್ಲಿಯೇ ಹಪ್ಪಳ ಉಜ್ಜತೊಡಗಿದರು. ಒಂದು ಕೆ.ಜಿ. ಹಪ್ಪಳ ಉಜ್ಜಿದರೆ 4 ರಿಂದ 5 ರೂ. ಸಿಗುತ್ತದೆ. ಪ್ರಾರಂಭದಲ್ಲಿ ಕಷ್ಟವೆನಿಸಿದರೂ ಕ್ರಮೇಣ ಆ ಕೆಲಸದಲ್ಲಿ ನೈಪುಣ್ಯವನ್ನು ಗಳಿಸಿ 8 ರಿಂದ 12 ಕೆ.ಜಿ. ಹಪ್ಪಳ ಉಜ್ಜಲು ತೊಡಗಿದರು. ಒಂದು ತಿಂಗಳಲ್ಲಿ ಒಂದು ಸಾವಿರದಿಂದ ಒಂದು ಸಾವಿರದ ಎಂಟುನೂರರವರೆಗೆ ಸಂಪಾದಿಸತೊಡಗಿದರು.

ರಾತ್ರಿ ಹತ್ತು ಹನ್ನೊಂದು ಗಂಟೆಗೆ, ಮೈಕೈನೋವಿನಿಂದ, ಊಟ ಮಾಡಿ ಹಾಸಿಗೆಗೆ ತಲೆಕೊಟ್ಟು ನಿದ್ದೆ ಮಾಡುತ್ತಿರುವಾಗ ಮನೆಗೆ ಗಂಡನ ಆಗಮನ. ಈಕೆಗೂ ಮೈಯಲ್ಲಿ ಮುಳ್ಳು ಚುಚ್ಚಿದಂತ ನೋವು, ಮೈಕೈ ಆಡಿಸದಷ್ಟು ಮೈಬಾರ. ಈಕೆ ಮೈ ಮುರಿಯುವ ಹಾಗೆ ದುಡಿದರೂ, ಗಂಡನಿಗೆ ಹೆಂಡತಿಯ ಕರುಣೆ, ಮಾನವೀಯತೆಯಿಲ್ಲ. ಆಕೆಯೇ ಎದ್ದು ಊಟ ಬಡಿಸಬೇಕು. ಊಟ ಬಡಿಸುವುದಷ್ಟೇ ಅಲ್ಲ, ಆತನ ಊಟ ಮುಗಿಯುವವರೆಗೆ ಆತನ ಮುಂದೆ ಕುಳಿತಿರಲೇಬೇಕು. ಒಮ್ಮೊಮ್ಮೆ ತೂಕಡಿಕೆ ತಡೆಯ ಲಾರದೇ ಎದ್ದುಹೋಗಿ ಮಲಗಿಬಿಡುತ್ತಿದ್ದರು. ಬೆಳಿಗ್ಗೆಯಿಂದ ಒಂದೇ ಸಮ ದುಡಿಯುವ ಜೀವ ಇನ್ನೇನು ಮಾಡೀತು? ಗಂಡ ಪಕ್ಕಕ್ಕೆ ಬಂದು ಮಲಗಿದಾಗ ರಾತ್ರಿ ಸೇವೆಯು ನಡೆಯಬೇಕು. ಇದಕ್ಕೆ ಸಮ್ಮತಿ ನೀಡದಿದ್ದಾಗ, ಬೆಳಿಗ್ಗೆ ಏಳುತ್ತಲೇ ಮನೆಯಲ್ಲಿ ಗುಡುಗು ಮಿಂಚು ಏತಕಾಲಕ್ಕೆ ಅಬ್ಬರಿಸುವುದು. "ಲೇ ನಿನಗೆ ಕೊಬ್ಬು ಜಾಸ್ತಿ ಆಯ್ತು ಕಣೆ. ಗಂಡ ಅಂದ್ರೆ ಮರ್ಯಾದೆನೂ ಇಲ್ಲ. ಗೌರವಾನೂ ಇಲ್ಲ. ಈ ನಡುವೆ ಸಂಪಾದಿಸ್ತೀಯಾ ಅಂತ ಧಿಮಾಕು ಮಾಡ್ತೀಯ. ನಾನು ನೋಡ್ತಾನೆ ಇದ್ದೀನಿ. ಅದೆಷ್ಟು ದಿನ ನಾನು ಇಲ್ಲದೆ ಮಲಗ್ತಿಯೋ ನೋಡ್ತೀನಿ. ಇಲ್ಲಾ ಬೇರೆ ಯಾರನ್ನಾದ್ರು ಸರಿ ಮಾಡಿಕೊಂಡಿದ್ದೀಯಾ" ರಾತ್ರಿ ನನ್ನ ಊಟ ಇನ್ನೂ ಮುಗಿಸಿಲ್ಲ ಅಂತ ಗೊತ್ತಿದ್ರು ಹೋಗಿ ನಿದ್ದೆ ಮಾಡಿದ್ದೀಯಾ? ನೀನು ಹಿಂಗೆ ಮಾಡ್ತಾ ಇರು ನಾನು ಇನ್ನೊಬ್ಬಳನ್ನು ಕಟ್ಟಿಕೊಂಡು ನಿಂಗೆ ಬುದ್ಧಿ ಕಲ್ಸ್ತೀನಿ. ಯಾವಾಗ್ಲೂ ಇದೇ ಮಾತು. ಕೇಳಿಕೇಳಿ ರೋಸಿ ಹೋಗಿತ್ತು. ಆಕೆ ಒಂದು ದಿನ ತಮಾಷೆಗೆ ಎಂಬಂತೆ "ಆಯ್ತು ನೀವು ಇನ್ನೊಬ್ಬಳನ್ನು ಕಟ್ಟಿಕೊಳ್ಳಿ. ನಾನು ಇನ್ನೊಬ್ಬನನ್ನು ಕಟ್ಟಿಕೊಳ್ತೀನಿ" ಏನೇ ಇಷ್ಟು ಮುಂದೆ ಹೋಗಿಬಿಟ್ಟಿದ್ದೀಯಾ? ಪರ್ವಾಗಿಲ್ಲ ಕಣೆ ನೀನು, ನಾನು ಇನ್ನು ಸತ್ತಿಲ್ಲ ಕಣೆ. ನಿನ್ನನ್ನು ಹೊತ್ತುಕೊಂಡು ಹೋಗಿ ರೈಲ್‌ಹಳಿ ಮೇಲೆ ಮಲಗಿಸಿ, ಒಂದೇ ಕಾಲಲ್ಲಿ ನಿನ್ನ ಮೆಟ್ಟಿ ಹೊಸಕಿ ಹಾಕಿ, ಅಡ್ಡಡ್ಡ ಇಟ್ಟು "ಯಾವನ್ನೊ ಇಟ್ಟುಕೊಡಿದ್ಲು, ನನಗೆ ಗೊತ್ತಾಗಿ ಹೋಯ್ತು ಅಂತ ಪ್ರಾಣ ಕಳೆದುಕೊಂಡ್ಲು ಅಂತ ಪುಕಾರ್ ಹುಟ್ಟಿಸ್ತೀನಿ ಹುಷಾರ್ ಎಂದು ಕೂಗಾಡಿದ್ದ. ಅಷ್ಟಕ್ಕೆ ಆಕೆ 'ಥೂ' ಹೆಣ್ಣು ಜೀವವೇ, ಗಂಡು ಆಡಬಹುದು, ಅನ್ನಬಹುದು, ಮಾಡಲೂಬಹುದು, ಆದರೆ ಹೆಣ್ಣು ತಮಾಷೆಗಾದರೂ ನುಡಿಯಬಾರದು ಎಂದು ದಿನಪೂರ್ತಿ ಅತ್ತಿದ್ದಳು. ನೊಂದಜೀವ ಗೆಳತಿಯೊಡನೆ, ನಾನು ಎಂತವಳು ಅಂತ ಆತನಿಗೆ ಗೊತ್ತಿದೆ. ಇಷ್ಟು ವರ್ಷ ಆತನೊಡನೆ ಸಂಸಾರ ಮಾಡಿದೀನಿ. ಆತನಿಗೆ ಯಾವತ್ತು ವಂಚನೆ ಮಾಡಿದವಳಲ್ಲ. ನನಗೆ ಎಷ್ಟೇ ಮೈಕೈ ನೋವಿದ್ದರೂ, ಆತನಿಗೆ ಸುಖ ಕೊಟ್ಟಿದ್ದೀನಿ ಎಂದು ಮುಮ್ಮಲ ಮರುಗಿದಳು.

ಇದಾದ ಕೆಲವು ದಿನಗಳ ನಂತರ ಆತ ಒಂದು ದೊಡ್ಡ ಕ್ಯಾಲೆಂಡರ್‌ನ್ನು ತಂದು ಗೋಡೆಗೆ ಹಾಕುತ್ತಾ, "ನೋಡೆ ದಿನಾ ಬೆಳಿಗ್ಗೆ ಎದ್ದು ಇದನ್ನೂ ನೋಡು. ಆಗಲಾದ್ರು ನಿನಗೆ ಗಂಡನ್ನ ಹೇಗೆ ನೋಡಿಕೊಳ್ಳಬೇಕು ಅಂತ ಬುದ್ಧಿ ಬರುತ್ತೆ ಎಂದು ಕರೆಯುತ್ತಾನೆ. ಕೆಲಸ ಮಾಡುತ್ತಿದ್ದ ಆಕೆ ಹೊರಬಂದು ಗೋಡೆಯ ಮೇಲೆ ಹಾಕಿದ್ದ ಕ್ಯಾಲೆಂಡನತ್ತ ನೋಡುತ್ತಾಳೆ. ಆದಿಶೇಷನ ಮೇಲೆ ಶ್ರೀಮನ್ನಾರಾಯಣ ಸುಖವಾಗಿ ಪವಡಿಸಿದ್ದಾನೆ. ಮಹಾಲಕ್ಷ್ಮಿ ನಾರಾಯಣನ ಕಾಲುಬುಡದಲ್ಲಿ ಕುಳಿತು ಆತನ ಕಾಲುಗಳನ್ನು ಒತ್ತುತ್ತಿದ್ದಾಳೆ!

ಅಮ್ಮ

ಕೇಳಿದ ಪ್ರಶ್ನೆಗಳಿಗೆಲ್ಲಾ
ಪಟಪಟ ಉತ್ತರಿಸಿದಳು
ಶಾಲೆಗೆ ಹೋಗಿ ಮೂರಕ್ಷರ ಕಲಿಯದ
ಇವಳ ಜಾಣ್ಮೆಗೆ ನಮ್ಮ
ಸ್ನೇಹಿತರು ಸೋಜಿಗಗೊಂಡರು
ಅವಳ ನೆನಪು, ಉತ್ತರದಲ್ಲಿ ಚಾಲಾಕಿ
ಖಚಿತ ನಿಲುವು ಕಂಡು ಚಕಿತರಾಗಿದ್ದರು
ಅವಳ ತೊಟ್ಟ ಲಂಗ ಉಟ್ಟ ಕಿರಿಗೆಯ
ಬಣ್ಣ ಚಿತ್ರಗಳ ಬಿಡಿಸಿ ಹೇಳುತ್ತಾ
ಕೊನೆಗೊಮ್ಮೆ ಬಂದು ಸೇರಿದ್ದಳು.
ಸೀರೆಯ ಕುಸುರಿಯ ಕಲೆಗೆ
ಅವಳ ಸ್ಮೃತಿಯಲ್ಲಿ ಸೇರಿ ಹೋಗಿದ್ದ
ಹಲವು ವಿಚಾರಗಳಿಗೆ ಕತ್ತರಿ ಹಾಕಿದ್ದಳು
ಅದರ ಬಗ್ಗೆ ಕೆಣಕಿ ಕೇಳಿದರೆ
ಅವಳ ಮುಖ ಉಬ್ಬುತ್ತಿರಲಿಲ್ಲ
ಬಿರಿದ ತುಟಿಯಲಿ ಕಿರುನಗೆ ಸೂಸಿ
ಸತ್ಯಗಳ ಬಚ್ಚಿಟ್ಟ ಸತ್ಯಕ್ಕೆ
ಸಾಕ್ಷಿಗಳಿಲ್ಲದಂತೆ ಮಾಡುವ ಅವಳ
ತಂತ್ರಕ್ಕೆ ಎದುರಾಳಿ ಮುಗ್ಗರಿಸಿದ್ದುಂಟು
ಇತಿಹಾಸ ಕೆಣಕುವ ಮುನ್ನ
ವರ್ತಮಾನಕ್ಕೆ ಚಿಂತಿಸುವಳು
ಭವಿಷ್ಯತ್ತಿನ ಬಗ್ಗೆ ತಲೆಕೆಡಿಸಿಕೊಳ್ಳದವಳು
ಅನ್ನ ಇಲ್ಲದ ಕಾಲದಲಿ
ಬರೀ ಸೊಪ್ಪು ತಿಂದು
ತುಳಸಿ ನೀರ ಕುಡಿದು ಮಕ್ಕಳಿಗೆ
ಒಂದಿಷ್ಟು ಗಂಜಿ ಕುಡಿಸಿ ಕಾಲ ನೂಕಿದವಳು
ದಾಯಾದಿಗಳ ಬೆಂಕಿಯ ಸೆರಗಲ್ಲಿ
ಗಂಡನ ಅಲೆದಾಟದಲ್ಲಿ ತನ್ನ
ನೆತ್ತರ ಬಸಿದು ಬಸಿರ ಉಳಿಸಿ
ತೊಟ್ಟಿಲ ತೂಗಿದವಳು
ಎದುರಾಳಿಯ ಬತ್ತಳಿಕೆಯಲ್ಲಿ
ಅಡಗಿ ಕುಳಿತಿದ್ದ ಬಾಣಗಳ
ಬರಿಗಣ್ಣಲ್ಲಿ ಸುಟ್ಟು
ಸುಂಟರ ಗಾಳಿಯಲ್ಲಿ ತೂರಿ ಬಿಟ್ಟವಳು

ದ್ರೌಪದಿ ಸೀತೆಯರ
ಕತೆಯೊಂದಿಗೆ ಸುಭದ್ರೆಯ
ವ್ಯಥೆಯ ಕಟ್ಟಿ ಹಾಡಿ
ಶೂರ್ಪನಖಿಯ ಕತೆಗೆ
ಮರು ಹುಟ್ಟ ಕೊಟ್ಟವಳು
ತಾನೇ ನೇಯ್ದ ಉತ್ತರಾದೇವಿಯ
ಮತ್ತೆ ಮತ್ತೆ ಪಲಕುತ್ತಾ
ದಿಟ್ಟತನದಲ್ಲಿ ಸಾಗಿದವಳು
ಸಂಗಾತಿಗಳ ಕೂಡಿ ಕಟ್ಟಿ
ತಮ್ಮೊಳಗಿನ ಬೇನೆಗೆ
ಬೆಳಕ ಹಿಡಿಯಲು ತಾಕೀತು ಮಾಡುತ್ತಾ
ಬೇವ ಹೀರಿ ಜೀವ ಸೃಷ್ಟಿಸಿ
ಅಂಬೆಗಾಲಿಡಲು ಕಲಿಯುತ್ತಾ
ಓಟದ ಸ್ಪರ್ಧೆಗೆ ಹಸಿರು ನಿಶಾನೆ
ಪಡೆದವಳು
ಅವಳು
ನಿತ್ಯ ಇತಿಹಾಸಕ್ಕೆ ಸವಾಲಾಗಲು ಬಯಸಿದಳು.

ಡಾ. ಆರ್. ಸುನಂದಮ್ಮ
ಮೈಸೂರು

ದುಃಖಿತ ಮಹಿಳೆಯರಿಗೊಂದು ಆಶ್ರಮ ಕೇವಲ ಉಪದೇಶವಲ್ಲ

ತುಂಬ ಸಾಂಪ್ರದಾಯಿಕ ಕುಟುಂಬದಲ್ಲಿ ಹುಟ್ಟಿ ಬೆಳೆದ 9 ವರ್ಷದ 'ಶರೀಫಾ'ಳಿಗೆ ತನ್ನ ಹಳ್ಳಿಯಲ್ಲಿ ಸೈಕಲನ್ನೇರಿ ತಿರುಗಾಡುವ ಆಸೆ. ಅದೇ ಕನಸನ್ನು ಹೊತ್ತ ಶರೀಫಾಳಿಗೆ ವಿಮಾನದಲ್ಲಿ ಪರದೇಶಕ್ಕೆ ಹೋಗುವುದಕ್ಕಿಂತ ಹಿರಿಯದಾಗಿತ್ತು ಎಂದು ನೆನಪಿಸಿಕೊಳ್ಳುತ್ತಾಳೆ. ಶರೀಫಾ ತನ್ನ ಅಭಿಮಾನದ ಆಶ್ರಮಧಾಮ 'STEP' ನಲ್ಲಿ ಕುಳಿತು ತನ್ನ ಬದುಕಿನ ಹಿಂದಿನ ಪುಟಗಳನ್ನು ತಿರುವುತ್ತಾಳೆ. ಮಹಿಳೆಯರ ಉದ್ಧಾರಕ್ಕಾಗಿಯೇ ತನ್ನ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಸಾಧನೆಯನ್ನು, ಅದರ ಹಿಂದಿನ ಅನುಭವದ ಕಟ್ಟುಗಳನ್ನು ಒಂದೊಂದಾಗಿ ಬಿಚ್ಚುತ್ತಾಳೆ.

ಅವಳೀಗ ಕೇವಲ ಸೈಕಲ್ಲನ್ನು ತುಳಿದು ಊರು ಸುತ್ತಿ ಸುಖಿಸುವದಕ್ಕಿಂತ ಹೆಚ್ಚು ಸಂತೋಷವನ್ನು, ಮಹಿಳೆಯರಿಗಾಗಿಯೇ ಅನೇಕ ಸಂಘ ಸಂಸ್ಥೆಗಳನ್ನು "ಪುದುಕೊಟ್ಟೆ" ಜಿಲ್ಲೆಯಲ್ಲಿ ಹುಟ್ಟುಹಾಕಿ ಮಹಿಳೆಯರಿಗಾಗಿ ವಸತಿ ಗೃಹಗಳು, ಅನಾಥ ನಿರ್ಗತಿಕ ಮಹಿಳೆಯರಿಗೆ ಆಶ್ರಯ ನೀಡಿದ್ದಾಳೆ. ಅವಳೇ ಹೇಳುವಂತೆ ಅಪರಾತ್ರಿಗಳಲ್ಲಿ ಬಸ್ಸಿಗಾಗಿ ಕಾಯ್ದು ನಿರಾಸೆಯಿಂದ ಯಾವದಾದರೂ ವಸತಿ ಗೃಹಗಳಲ್ಲಿ ಆಶ್ರಯ ಕೇಳಿದಾಗ ಅವಳೊಬ್ಬ ದೇಹಮಾರಾಟಗಾರಳೆಂದೇ ತೀರ್ಮಾನಿಸಲಾಗುತ್ತದೆ. ಅದಕ್ಕೆ ಒಬ್ಬಂಟಿಗಳಾಗಿ ಇರುವ, ಮತ್ತು ತನ್ನತನ ಕಾಪಾಡಿಕೊಳ್ಳಲು, ವಿಚಾರ ಮಾಡಲು ಮಹಿಳೆಯರಿ ಗಾಗಿಯೇ ಶರೀಫಾ ಆಶ್ರಯ ಕಲ್ಪಿಸಿದ್ದಾಳೆ.

ಶರೀಫಾಳ ವಿಚಾರಗಳೆಲ್ಲ ಅವಳ "STEP" ನಲ್ಲಿ ಸಾಕಾರ ರೂಪ ತಳೆದಿವೆ. 1989ರಲ್ಲಿ ಬಾಡಿಗೆಯ ನಿವೇಶನದಲ್ಲಿ ಅವಳ ಕಲ್ಪನೆಯ 'ಆಶಯ' ದುಃಖಿತ ಮಹಿಳೆಯರಿಗಾಗಿ ಪ್ರಾರಂಭ ವಾಯಿತು. ಶರೀಫಾ ಮತ್ತು ಅವಳ ಸಹವರ್ತಿಗಳು ಮಹಿಳೆಯರಿಗೆ ಸಂಬಂಧಿಸಿದ 1000ಕ್ಕೂ ಹೆಚ್ಚು ಸಮಸ್ಯೆಗಳನ್ನು ಸೂಕ್ತವಾಗಿ ಪರಿಹರಿಸಿದ್ದಾರೆ, ವರದಕ್ಷಿಣೆ, ಅಂತರ್ಜಾತೀಯ ವಿವಾಹ, ಮದುವೆ ಇಲ್ಲದ ತಾಯಂದಿರು, ಘಟಸ್ಫೋಟ ಅಕ್ರಮ ಸಂಭೋಗ ಅಥವಾ ಒತ್ತಾಯದ ಸಂಭೋಗ ಅಲ್ಲದೇ ಮಾನಸಿಕ ದೈಹಿಕ ಹಿಂಸೆ, ಮದುವೆಯ ನಂತರದ ಮನಸ್ತಾಪಗಳು ಮತ್ತು ದೂರವಾಗುವುದು, ಇತ್ಯಾದಿ ಹಿಂದುಳಿದ ಮಹಿಳೆಯರ, ಮುಸ್ಲಿಂ ಮಹಿಳೆಯರ ಸಮಸ್ಯೆಗಳಿಗೆ ಕೂಡ ಶರೀಫಾಳ ಆಶ್ರಯದಲ್ಲಿ ಪರಿಹಾರವಿದೆ.

'ಪುದುಕೊಟ್ಟಾಯಂ'ನಲ್ಲಿ ಮಹಿಳೆಯರು ವಸ್ತುಗಳನ್ನು ಬಸ್ ನಿಲ್ದಾಣಗಳಲ್ಲಿ ಮಾರಾಟ ಮಾಡುವುದಕ್ಕೂ ಇದ್ದ ಅನೇಕ ಬಗೆಯ ತೊಂದರೆಗಳನ್ನು ಕಂಡು ಮರುಕಗೊಂಡ ಶರೀಫಾ, ಅವರೆಲ್ಲರಿಗೆ ಒಂದು ಸ್ಥಾಯಿ ಸ್ಥಾನವನ್ನು ಮತ್ತು ಸಮಾಧಾನದಿಂದ ಕುಳಿತು ವಿಚಾರ ವಿನಿಮಯ ಮಾಡಿಕೊಳ್ಳಲು, ಖರ್ಚು ವೆಚ್ಚಗಳನ್ನು ವ್ಯವಸ್ಥೆ ಮಾಡಿಕೊಳ್ಳಲು ವ್ಯವಸ್ಥೆ ಮಾಡಿಕೊಟ್ಟಿದ್ದಾಳೆ.

ಮಹಿಳೆಯರಿಗೆ ನಿರ್ದಿಷ್ಟವಾದ ಸ್ಥಾನಮಾನಗಳಿಲ್ಲದಾಗ ಅವಳು ಸ್ವಾಯತ್ತತೆಯನ್ನು ಹೇಗೆ ಕಂಡುಕೊಳ್ಳಬಲ್ಲಳು? ಇದು ಶರೀಫಾಗಿರುವ ಪ್ರಶ್ನೆ.

10 ಜನ ಮಕ್ಕಳಲ್ಲಿ ಕೊನೆಯವಳಾಗಿ ಹುಟ್ಟಿದ ಶರೀಫಾ ಕನಸಿದ ಸೈಕಲ್ಲನ್ನು ಏರದೇ ಹೋದರೂ, ಅಲೀಘಡದ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ "ಡಿಪ್ಲೋಮಾ ಇನ್ ಮಾನೇಜ್‌ಮೆಂಟ್" ಮುಗಿಸಿದ್ದಾಳೆ. "ಅಖಿಲ ಭಾರತೀಯ" ಮಹಿಳಾ ಸಭೆಗೆ ಭಾಷಾಂತರ ಕಾರಳಾಗಿ ಪಾಟ್ನಾಗೆ ಹೋದಾಗ, ಅಲ್ಲಿ ಅವಳಿಗೆ ಹೊಸ ಹೊಸ ಸಮಸ್ಯೆಗಳ ಲೋಕವೇ ಕಣ್ಣಿಗೆ ಬಿತ್ತು. ಮಹಿಳೆಯಲ್ಲಿರುವ ದೇಶಾಭಿಮಾನ, ಅವರ ಮೇಲಿನ ದೌರ್ಜನ್ಯ ನೋಡಿದ ಕೇಳಿದ ಶರೀಫಾ ತನ್ನ ಗುರಿಯನ್ನು ಇನ್ನೂ ಗಟ್ಟಿಗೊಳಿಸಿಕೊಂಡಿದ್ದಳು. ಶರೀಫಾಳ ತಾಯಿ 'ಹಲೀಮಾಬಿ' ಮಹಿಳಾ ಪರವಾಗಿರದಿದ್ದರೂ ಅವಳ ಅಂತರ್ಯದಲ್ಲಿ ಅದು ಹುದುಗಿತ್ತು. ತನ್ನ ಹತ್ತು ಮಕ್ಕಳನ್ನು ಗಂಡನ ದುಡಿತದ ಸಹಾಯವಿಲ್ಲದೇ ತನ್ನದಾದ ಸ್ವಂತ ದುಡಿಮೆ ಮಾಡಿ ಸಾಕಿದುದನ್ನು ಶರೀಫಾ ನೆನಪು ಮಾಡಿಕೊಳ್ಳುತ್ತಾಳೆ.

ಇಂದು ಶರೀಫಾ 37 ವರ್ಷಗಳ ಪ್ರೌಢೆ. ತನ್ನ ತಾಯಿ, ತಂಗಿ ಮತ್ತವಳ ಎರಡು ಮಕ್ಕಳಿಗೆ ಪಾಲಕಳಾಗಿದ್ದಾಳೆ. 1991ರಲ್ಲಿ ಜಿಲ್ಹಾಧಿಕಾರಿಗಳು ಶರೀಫಾಳ, ಪರಿಶ್ರಮಕ್ಕೆ 10 ಸೆಂಟ್ಸ್ 'ಭೂದಾನ ಮಾಡಿದ್ದರು. 5 ವರ್ಷಗಳಲ್ಲಿ 'STEP' ಅಲ್ಲಿ ತಲೆ ಎತ್ತಿದೆ. ಸಾರ್ವಜನಿಕರಿಂದ ಸಹಾಯ ಹಸ್ತ ದೊರೆತು ಕಟ್ಟಡ ನಿಂತಿದೆ. ಅವಳ ಈ ಬೆಳವಣಿಗೆಯನ್ನು ಸಹಿಸದ ಅನೇಕರು ಇದೊಂದು ಹೊಸ ವೇಶ್ಯಾಗೃಹವೆಂದೂ ಕುಹಕವಾಡಿ ತ್ಯಾಜ್ಯವಸ್ತುಗಳನ್ನು ಅಲ್ಲಿ ಜಮಾಯಿಸುತ್ತಿದ್ದುದನ್ನು ಪರಿತಾಪದಿಂದ ಹೇಳುತ್ತಾಳೆ ಶರೀಫಾ, ಅಲ್ಲಿಗೆ ಬರುವ ಕಟ್ಟಡ ನಿರ್ಮಾಣ

ಮಾಡುವವರಿಗೂ ಅಡೆತಡೆ ಒಡ್ಡಿದುದನ್ನು ಕಹಿ ಅನುಭವ ವೆನ್ನುತ್ತಾಳೆ.

1999 ರಲ್ಲಿ ಸಮಾಜಕಲ್ಯಾಣ ಇಲಾಖೆಯಿಂದ 'STEP' ಸಂಸ್ಥೆಗೆ "ದುರ್ಗಾಬಾಯಿ ದೇಶಮುಖ" ಅವರ ಪುರಸ್ಕಾರ ದೊರೆತದ್ದು ಉಲ್ಲೇಖಾರ್ಹ. ಪ್ರಧಾನ ಮಂತ್ರಿಗಳಿಂದ ಪುರಸ್ಕಾರವನ್ನು ಸ್ವೀಕರಿಸಿದುದು ಸ್ಥಳೀಯ ಅಧಿಕಾರಗಳ ಕಣ್ಣನ್ನೇನು ತೆರೆಸಲಿಲ್ಲ. ಆದರೆ ಶರೀಫಾ ಆ ಹಣದಿಂದ 'STEP' ಗೆ ಮತ್ತೊಂದು ಮಜಲನ್ನು ಏರಿಸಿದ್ದಾಳೆ.

ಇನ್ನು ದೊಡ್ಡ ದೊಡ್ಡ ಸಮಸ್ಯೆಗಳ ಬಗ್ಗೆ ಕಾಳಜಿ ಶರೀಫಾಳಿಗೆ ಇದೆ. ಒಂಟಿಯಾಗಿ ಪ್ರವಾಸದಲ್ಲಿರುವ ಮಹಿಳೆಯರಿಗಾಗಿ ಅತೀ ಕಡಿಮೆ ವೆಚ್ಚದಲ್ಲಿ ಆಶ್ರಯ ಕೊಡುವ ಕೊಠಡಿಗಳ ನಿರ್ಮಾಣ, ಸ್ವಸಹಾಯದಲ್ಲಿ ವಸತಿಗೃಹ ನಡೆಸುವ ಯೋಜನೆಗಳು ಕೂಡ ಇವೆ.

ಮುಸ್ಲಿಂ ಮಹಿಳೆಯರಿಗಾಗಿಯೇ ತಿರುಚಿಯಲ್ಲಿ 'ಸಾಯಾ' ಎಂಬ ಸಂಘಟನೆಯನ್ನು ಹುಟ್ಟುಹಾಕಿದ್ದಾಳೆ. ಒಂದು ದಶಕದಿಂದ ಮಹಿಳಾ ಸಮಸ್ಯೆ ಪರಿಹಾರಗಳಲ್ಲಿಯೇ ಮುಳುಗಿದ ಶರೀಫಾ ಬೇರೆ ಯಾರೊಬ್ಬರೂ ಈ ಸಮಸ್ಯೆಗಳತ್ತ ಗಮನಹರಿಸದಿರುವುದನ್ನು ತುಂಬ ಕಟುವಾದ ಮಾತುಗಳಿಂದ ಹೇಳಿದ್ದಾಳೆ.

ಇತ್ತೀಚೆಗಷ್ಟೇ ತಮ್ಮ ಸಂಘಟನೆಗೆ 12000 ಡಾಲರ ಸಹಾಯವನ್ನು "ವಾಶಿಂಗ್ಟನ್"ನಿಂದ ಪಡೆಯುವ ಸಂತೋಷ ದಲ್ಲಿದ್ದಾಳೆ. ಆದರೆ ಸೆಪ್ಟೆಂಬರ 11ರ ಸಂಘಟನೆ ಅವಳ ಮುಸ್ಲಿಂ ಹೆಸರಿನಿಂದಾಗಿ ನಿರಾಸೆ ತಂದಿದೆ. ಆದರೆ ಶರೀಫಾ ಪೂರ್ಣ ನಿರಾಶಳಾಗಿಲ್ಲ. ಮನುಷ್ಯರಲ್ಲಿ ಇನ್ನೂ ಮಾನವೀಯತೆ ಉಳಿದಿದೆ. ಇಂದಿಲ್ಲ ನಾಳೆ ತನ್ನನ್ನು ಗುರುತಿಸುವ ದಿನ ಬಂದೇ ಬರುತ್ತದೆ ಎನ್ನುತ್ತಾಳೆ

ಇಂಗ್ಲೀಷ್ ಮೂಲ : ಎಸ್. ಆನಂದ

ಕನ್ನಡಕ್ಕೆ: ಆರ್. ವಿಮಲ

ಮಹಿಳೆಯರಿಗೆ ಇಸ್ಲಾಮಿಕ್ ಪಾರ್ಲಿಮೆಂಟಿನಲ್ಲಿ ಪ್ರತಿನಿಧಿಸುವ ಹಕ್ಕು ಕೊಡಲು ಪಾಕಿಸ್ತಾನದ ಕೆಲವು ಪಕ್ಷಗಳು ತಯಾರಾಗಿವೆ. ಆದರೆ ಅವರು ಬುರ್ಕಾದಿಂದ ತಮ್ಮನ್ನು ಮುಚ್ಚಿಕೊಳ್ಳಬೇಕು. ಹಾಗೂ ಇಸ್ಲಾಂ ಧರ್ಮವನ್ನು ಆಚರಿಸುವಂತವ ರಾಗಿರಬೇಕು.

ಗುಲ್ ಮೊಹರ್ ಮಾತಾಡಿದಾಗ

ಏನ್ ಹೇಳಲಿ ಹುಡುಗಿ
ಕವನ ಬರೆವ ಹುಡುಗನ ಕರಾಮತ್ತು
ಹೇಳುವೆನು ಕೇಳು ಅವನ ಮಸಲತ್ತು
ಏನ ಹೇಳಲಿ ಹುಡುಗಿ ದಿನವೊಂದು
ಹುಡುಗಿಯ ಕೂಡ ಅವನ ಲಲ್ಲೆಯ ಬೆಡಗು
ಮೊನ್ನೆ ಪ್ರಕಟವಾದ ಕವನದಲಿ ಸೊಬಗು
ಅದೆಷ್ಟು ಮೆಚ್ಚಿಕೊಂಡೆ ನೀನು ಮತ್ತೆ ಮುತ್ತೆ
ಸಂಪಿಗೆ ಗುಲಾಬಿಗೆ ಶೇವಂತಿಗೆಯ ರೂಪಿಗೆ
ಕೆಂದಾವರೆ ಕನ್ನೈದಿಲೆ ಪಾರಿಜಾತದ ಸೊಬಗಿಗೆ
ಕಲ್ಪನೆಗೂ ಮೀರಿದಾ ಕನಸುಗಳ ಸರಮಾಲೆ
ಹೆಣೆದೆಗೆದು ಬೆಸೆದಿಹನು ಮೋಸದಾ ಹುಸಿಲೀಲೆ

ಏನ ಹೇಳಲಿ ಹುಡುಗಿ
ಕವನ ಬರೆಯುವ ಹುಡುಗನ ಕರಾಮತ್ತು
ಕೇಳಿ ನೀನಿಲ್ಲೆ ಅತ್ತುಬಿಡು ಒಮ್ಮೆ
ನಿನ್ನಂತ ಹತ್ತು ಹಲವರ ಹೃದಯವ
ಖಾಲಿ ಮಾಡಿದ ಗೈರತ್ತು

ಅದ್ಯಾವ ಮೋಡಿಗೆ ಬೆರಗಾದಿರೋ ನಾ ಕಾಣೆ
ಮೊನ್ನೆ ಮೊನ್ನೆಯ ಬೆಳ್ದಿಂಗಳ ಹಗರಣ
ಗೆಳತಿಯ ಗೆಳತಿಯೊಡನೆ ಚೆಕ್ಕಂದ
ತೋಳ್ತೆಕ್ಕೆಯ ಅನುಬಂಧ
ಚಂದಿರನ ಎದುರಲ್ಲೇ ರಾಸ ಬಂಧ
ಎಚ್ಚರಿಸದೆ ನಾಗ ತಂಗಾಳಿ ಸೂಸಿ
ಮೆತ್ತನೆಯ ಹೂಗಳ ಮೆಲ್ಹಾಸ ಹಾಸಿ
ಮೋಡಗಳ ಮರೆಯಲ್ಲಿ ಹುದುಗಿದ
ಚಂದ್ರಮ ನಾಚಿ ಹನಿಸಿದನು ನಾಲ್ಕು
ಹನಿ ನೀರ,........ನೀರೆ ನೀ
ಇನ್ನಾದರೂ ಬಿಟ್ಟು ಬಿಡು ಆ
ನಿನ್ನ ಹುಚ್ಚು ಭ್ರಮೆ!!
ಈ ನನ್ನ ನೆರಳ ಕೆಳಗೆ
ಕಾಯುವ ಒಲುಮೆ
ಕವನ ಬರೆವ ಹುಡುಗನಿಗಾಗಿ
ತೋರುವಾ ನಲುಮೆ.

ಎಸ್. ನಾಗರತ್ನ
ತುಮಕೂರು

ಲೈಂಗಿಕ ಅತ್ಯಾಚಾರದ ಹಿಂದಿರುವ ಶಕ್ತಿಗಳು

ಈ ನಾಡು ಪರಕೀಯರಿಂದ ಬಿಡುಗಡೆ ಪಡೆದು 54 ವರ್ಷಗಳು ಸಂದು ಹೋಗಿದೆ. ಆದರೆ ಮಹಿಳೆಯರಿಗೆ, ದಲಿತರಿಗೆ, ಬಡ ಜನರಿಗೆ ಎಲ್ಲಿದೆ ಸ್ವಾತಂತ್ರ್ಯ? ಗಾಂಧೀಜಿ ಒಂದು ಮಾತು ಹೇಳಿದ್ದರು-"ಮಧ್ಯರಾತ್ರಿಯಲ್ಲಿ ಮಹಿಳೆ ಒಬ್ಬಳೇ ಯಾವ ಹೆದರಿಕೆಯೂ ಇಲ್ಲದೆ ಯಾವಾಗ ಓಡಾಡಬಲ್ಲಳೋ ಆವಾಗ ನಮಗೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿದ ಹಾಗೆ" ಎಂದು. ಆದರೆ ಆಕೆಯ ಮೇಲಿನ ದೌರ್ಜನ್ಯ ದಿನೇ ದಿನೇ ಹೆಚ್ಚುತ್ತಿದೆ. ಮಹಿಳೆಯೊಬ್ಬಳು ಒಂಟಿಯಾಗಿ ಜೀವಿಸುವುದೇ ಕಷ್ಟಕರವಾಗಿದೆ. ಆಕೆಯ ಸ್ವಾತಂತ್ರ್ಯವನ್ನು ಹರಣ ಮಾಡುವ ಗುತ್ತಿಗೆ ಪಡೆದ ಜನರ ಸಂಖ್ಯೆ ನಮ್ಮ ನಾಡಿನಲ್ಲಿ ಹೆಚ್ಚುತ್ತಿದೆ.

ಕೊಡಗಿನ ವಿರಾಜಪೇಟೆಯ ಮಡೆನೂರಿನಲ್ಲಿ ಕಳೆದ ಜೂನ್ 14 ರಂದು ಗಿರಿಜನ ಹಾಡಿಗೆ ನುಗ್ಗಿದ ನಾಗರಿಕರೆನಿಸಿಕೊಂಡ ಜನ ರಾಜು ಎಂಬವನ ಪತ್ನಿ ಮತ್ತು ಮಗಳ ಮೇಲೆ ಅತ್ಯಾಚಾರ ನಡೆಸಿದರು. ರಾಜು ಇದನ್ನು ಪ್ರತಿಭಟಿಸಿದನೆನ್ನಲಾಗಿದ್ದು, ರಾತ್ರಿಯಾಗುತ್ತಿದ್ದಂತೆ ಬಹಳಷ್ಟು ಜನರ ಗುಂಪು ಪುನಃ ಹಾಡಿಗೆ ನುಗ್ಗಿ ರಾಜುವಿನ ಹೆಂಡತಿ ಮತ್ತು ಮಗಳ ಮೇಲೆ ಮತ್ತೊಮ್ಮೆ ದೌರ್ಜನ್ಯವೆಸಗಿ ಕಾಡಿಗೆ ಒಯ್ದರು ಎನ್ನಲಾಗಿದೆ.

ಈ ಘಟನೆಯ ನಂತರ ಹಾಡಿಯ ಇಡೀ ಜನಜೀವನವೇ ತಲ್ಲಣಗೊಂಡಿದೆ. ಗುಡಿಸಲಲ್ಲಿ ನಿದ್ದೆ ಹತ್ತದ ವಾತಾವರಣ ಸೃಷ್ಟಿಯಾಗಿದೆ. ಜಿಲ್ಲೆಯ ಮೂಲ ನಿವಾಸಿಗಳೆಂದು ಕರೆಸಿಕೊಳ್ಳುವ ಈ ಜನ ಪ್ರಾಕೃತಿಕವಾಗಿ ಸುಂದರವಾದ ಈ ನಾಡಿನಲ್ಲಿ ಕಾಡು ಪ್ರಾಣಿಗಳ ಶೌರ್ಯವನ್ನು ಎದುರಿಸಿ ಸಾಹಸಮಯವಾಗಿ ಬದುಕು ಸಾಗಿಸುವವರು. ನಾಗರಿಕರೆಂದು ಕರೆಸಿಕೊಳ್ಳುವ ವರ್ಗದ ಕೆಲವು ವ್ಯಕ್ತಿಗಳ ಅನಾಗರಿಕ ಕ್ರೌರ್ಯಕ್ಕೆ, ಅಟ್ಟಹಾಸಕ್ಕೆ ಈ ಮೂಲ ನಿವಾಸಿಗಳು ಮುದುಡಿ ಹೋಗಿರುವುದು ದುರಂತ.

ಈ ಮೇಲಿನ ಘಟನೆ ನಡೆದ ಬೆನ್ನಲ್ಲೇ ತಿರುಮಲೆ ಸಮೀಪದ ಚೌಡುಗಟ್ಟೆಯಲ್ಲಿ ಅರಣ್ಯ ವೀಕ್ಷಕಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ವಿಧವೆ ರಾಣಿ ಎಂಬಾಕೆಯ ಮೇಲೆ ಸಾಮೂಹಿಕ ಅತ್ಯಾಚಾರಲೆಸಗಿ ಕೊಲೆ ಮಾಡಲಾಯಿತು.

ಬಳ್ಳಾರಿ ಜಿಲ್ಲೆಯ ವಣೆನೂರು ಗ್ರಾಮದ ದಲಿತ ಮಹಿಳೆಯನ್ನು ಬೆತ್ತಲೆಗೊಳಿಸಿ ಬೀದಿಯಲ್ಲಿ ಮೆರಣಿಗೆ ಮಾಡಲಾಯಿತು. 1985 ರಲ್ಲಿ ಕುದುರೆ ಮೋತಿಯಲ್ಲಿ ನಡೆದ ಮಹಿಳೆಯರ ಬೆತ್ತಲೆ ಮೆರವಣಿಗೆ ದೌರ್ಜನ್ಯ ಎರ್ರಮ್ಮಳ ಪ್ರಕರಣದ ರೂಪದಲ್ಲಿ ಮರುಕಳಿಸಿದೆ.

ಮಹಿಳೆಯರ ಮೇಲಿನ ದೌರ್ಜನ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು; ಕಾನೂನಿನ ವಿಫಲತೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯ ಲೋಪವೇ ಇದಕ್ಕೆ ಕಾರಣವಾಗಿದೆ. ನಮ್ಮ ಸಮಾಜದಲ್ಲಿ ಬೇರುಬಿಟ್ಟ ಕ್ರೂರತಕ್ಕೆ ಈ ಘಟನೆಗಳು ಪ್ರತ್ಯಕ್ಷ ಸಾಕ್ಷಿಯಾಗಿವೆ. ಸ್ತ್ರೀಯರ ಮೇಲೆ ನಡೆಯುವ ಲೈಂಗಿಕ ಅತ್ಯಾಚಾರ ಪುರುಷ ಪ್ರಧಾನ ಮೌಲ್ಯಗಳ, ಪ್ರಭುತ್ವದ ಅಧಿಕಾರದ ಸಂಕೇತವಾಗಿದೆ.

ಸ್ತ್ರೀಯರನ್ನು ಎರಡನೇ ದರ್ಜೆ ಪ್ರಜೆಯಾಗಿ ಹಾಗೂ ಅಸ್ಪೃಶ್ಯಳನ್ನಾಗಿ ನಮ್ಮ ಸಮಾಜ ಕಾಣುತ್ತಿರುವುದಕ್ಕೆ ಇಂತಹ ಕ್ರೌರ್ಯಗಳು ಪ್ರತ್ಯಕ್ಷ ಸಾಕ್ಷಿಯಾಗುತ್ತಿವೆ.

ಇಂತಹ ಘಟನೆಗಳು ಸಂಭವಿಸಿದಾಗ; ಆ ಪ್ರದೇಶದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವ ಹೇಳಿಕೆ ನೀಡಿ, ಸರಕಾರ ಸುಮ್ಮನಿರುತ್ತದೆಯೇ ಹೊರತು ಯಾವುದೇ ಅಧಿಕಾರಿಯ ವಿರುದ್ಧವೂ ಕ್ರಮ ಕೈಗೊಂಡ ನಿದರ್ಶನಗಳಿಲ್ಲ.

ಜಯಶ್ರೀ

ಕುಶಾಲನಗರ

ಅರಸ

ಕ್ಷಣ ಹೊತ್ತು ಹರಟೆ ಲಲ್ಲೆಯ ಸರಸ
ಬಾಯ್ತಪ್ಪಿ ಮರುನುಡಿಯೇ ಕಲ್ಲೆದೆಯ ಅರಸ
ಬಿರು ನುಡಿಯ ಕೆಂಡದಲಿ ಜಾಡಿಸಿ ಗೊರಸು
ಕೆಟ್ಟ ಮಾತನು ಬಳಸಿ ಹೊರಿಸುವನು ಕಳಸ

ಶ್ರೀಮತಿ ಕಲ್ಪನಾ ಭಟ್

ಹೆಣ್ಣು ಸವ್ಯಸಾಚಿ



ಮೊದಲ ಮಹಾಯುದ್ಧ ಮುಗಿದ ನಂತರದ ದಿನಗಳವು. ಇಡೀ ಜಗತ್ತು ಹಣದುಬ್ಬರಕ್ಕೆ ಸಿಕ್ಕಿ ತೊಳಲುತ್ತಿತ್ತು. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆನಿಸಿದ (ಆಗಿನ್ನೂ ಭಾರತ ಸ್ವತಂತ್ರವಾಗಿರಲಿಲ್ಲ) ಅಮೆರಿಕಾದ ಆರ್ಥಿಕ ಸ್ಥಿತಿ ಷೇರು ಮಾರುಕಟ್ಟೆಯ ಅಭೂತಪೂರ್ವ ಕುಸಿತದಿಂದ ಪಾತಾಳಕ್ಕಿಳಿದಿತ್ತು. 1932 ರ ಒಲಿಂಪಿಕ್ಸ್ ಕೂಟವನ್ನು ಲಾಸ್ ಏಂಜಲೀಸ್‌ನಲ್ಲಿ ನಡೆಸಬೇಕೆಂದು ನಿರ್ಧರಿಸಿದ್ದರೂ ಹಣದ ಕೊರತೆ, ಅಪಾರವಾದ ನಿರುದ್ಯೋಗ ಮತ್ತು ಬಡತನದಿಂದ ದೇಶ ತತ್ತರಿಸಿತ್ತು. ಹಾಲೆಂಡ್ ಸೇರಿದಂತೆ ಹಲವಾರು ರಾಷ್ಟ್ರಗಳಿಗೆ '32 ರ ಒಲಿಂಪಿಕ್ಸ್ ನಡೆಸಲು ಸಾಧ್ಯವೇ' ಎಂಬ ಆಹ್ವಾನವನ್ನು ತೇಲಿಬಿಡಲಾಯಿತು. ಯಾರೂ ಅಂಥ ಸಾಹಸಕ್ಕೆ ಕೈ ಹಾಕಲು ತಯಾರಿರಲಿಲ್ಲ. ಆದರೂ ಒಲಿಂಪಿಕ್ ಚೈತನ್ಯ ಒಗ್ಗೂಡಿ ಲಾಸ್ ಏಂಜಲೀಸ್ ಕೂಟವನ್ನು ಸಂಭ್ರಮದಿಂದಲೇ ನಡೆಸಿತು. ಒಲಿಂಪಿಕ್ ಇತಿಹಾಸದಲ್ಲಿ ಮೊದಲಬಾರಿಗೆ ಜಗತ್ತಿನ ಕ್ರೀಡಾಪಟುಗಳೆಲ್ಲ ಒಂದೆಡೆ ಕಲೆಯುವಂತೆ ಮಾಡುವ ಒಲಿಂಪಿಕ್ ಗ್ರಾಮ ನಿರ್ಮಾಣದ ಪರಿಕಲ್ಪನೆ ಕುಡಿಯೊಡೆದು ಇಲ್ಲಿ ಸಾಕಾರ ಪಡೆಯಿತು. ಮೊಟ್ಟ ಮೊದಲಬಾರಿಗೆ ಸ್ಪರ್ಧೆಗೆ ಆಗಮಿಸಿದ ಶ್ರೀಮಂತ ವರ್ಗದವರು, ರಾಜಕುಮಾರರ ಜೊತೆ, ಗಾರೆ ಕೆಲಸದವರು, ಬಡಗಿಗಳು, ರೈತರು ಬೆರೆತು ಒಟ್ಟಿಗೆ ಊಟ ಮಾಡಿ ವರ್ಗ ಹಾಗೂ ವರ್ಣಭೇದ ನೀತಿಯನ್ನು ತೊಡೆದುಹಾಕಿ ಮಾನವೀಯತೆಯನ್ನು ಆರಾಧಿಸಿದರು.

ಇಂಥ ಕಠಿಣ ದಿನಗಳ ಹಿನ್ನೆಲೆಯಲ್ಲಿ ಬಿರುಗಾಳಿಯಂತೆ ಬಂದ ಮಿಲ್ ಡ್ರಿಡ್ ಡೈಡ್ರಿಕ್ಸನ್ ಇಡೀ ಕ್ರೀಡಾಕೂಟಕ್ಕೆ ಹೊಸ ಬಗೆಯ ಉತ್ಸಾಹ ತುಂಬಿದಳು. ಅವಳೊಂದು ಸಿಡಿಮದ್ದಿನ ಉಂಡೆ. ಅಷ್ಟೇ ಅಲ್ಲ. ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಮಹಿಳೆಯರ ಸಾಮರ್ಥ್ಯವನ್ನು ಕಡೆಗಣಿಸುತ್ತಿದ್ದ ನೀತಿಯನ್ನೇ ಬದಲಿಸುವಂತೆ ಮಾಡಿದಳು. ಅವಳಿಂದಾಗಿಯೇ ಒಲಿಂಪಿಕ್ಸ್‌ನಲ್ಲಿ ಮಹಿಳಾ ಕ್ರೀಡಾ ಚಟುವಟಿಕೆ ಸ್ಫೋಟಗೊಂಡಿತೆಂದು ಹೇಳಬಹುದು.

1914ರಲ್ಲಿ ಜನಿಸಿದ ಮಿಲ್‌ಡ್ರಿಡ್ ಎಲಾ ಡೈಡ್ರಿಕ್ಸನ್‌ಗೆ ಎಲ್ಲಾ ಟೆಕ್ಸಾಸ್ ಜನರ ಮನೋಧರ್ಮದಂತೆ ಸಿಕ್ಕ ಸಿಕ್ಕ ಕ್ಷೇತ್ರಗಳಲ್ಲಿ ದೊಡ್ಡದನ್ನು ಸಾಧಿಸುವ ತವಕ. ಹಾಗಾಗಿ ಅವಳ ಉತ್ಸಾಹಕ್ಕೆ ಬಾನೇ ಗಡಿಯಾಯಿತು. ಆಕೆಗೆ ಈಜು, ಕುದುರೆ ಸವಾರಿ, ದೋಣಿ ಪಂದ್ಯ, ನೆಗೆತ, ಬಾಕ್ಸಿಂಗ್, ಕುಸ್ತಿ, ಆಟೋಟಗಳೆಲ್ಲ ಕರಗತವಾದವು. ನಡುವೆ ಬಿಡುವು ದೊರೆತಾಗ ಬೇಸ್ ಬಾಲ್, ಹಾಕಿ, ಸಾಕರ್, ಬ್ಯಾಸ್ಕೆಟ್ ಬಾಲ್ ಆಟಗಳನ್ನೂ ಆಡಿ ಮೆಚ್ಚುಗೆ ಗಳಿಸಿದ್ದಳು. ಇನ್ನೂ ಬೇಸರವೆನಿಸಿದರೆ ಬಿಲಿಯರ್ಡ್ ಟೇಬಲ್‌ನಲ್ಲೂ ಚಮತ್ಕಾರ ತೋರಿಸಿ ಬರುತ್ತಿದ್ದಳು. ಗಾಲ್ಫ್‌ಕೋರ್ಸ್‌ನಲ್ಲಿ ರಾಷ್ಟ್ರೀಯ ಚಾಂಪಿಯನ್ ಅಲ್ಲದೆ, ವಿಶ್ವಚಾಂಪಿಯನ್ ಪಟ್ಟವನ್ನೂ ಗಳಿಸಿಕೊಂಡಿದ್ದಳು. ಆಡುಮುಟ್ಟದ ಸೊಪ್ಪಿಲ್ಲ, ಎನ್ನುವಂತೆ ಮಿಲ್ಡ್ರೆಡ್ ಆಡದ ಆಟವಿಲ್ಲ ಎಂಬಂತಾಗಿತ್ತು. ಇವೆಲ್ಲವುಗಳ ಜೊತೆಗೆ ಆಕೆ ಉತ್ತಮ ನರ್ತಕಿಯೂ ಆಗಿದ್ದಳು. ಅವಳ ಅಸಾಧಾರಣ ಪ್ರತಿಭೆಯನ್ನು ಕಂಡವನೊಬ್ಬ 'ಬೇಬ್ ನೀನು ಆಡದ ಆಟವೇನಾದರೂ ಇದೆಯೇ?'' ಎಂದು ಕೇಳಿದ ಪ್ರಶ್ನೆಗೆ ''ಇದೆ ನಾನು ಗೊಂಬೆಗಳ ಜೊತೆಗೆ ಆಡುವುದಿಲ್ಲ'' ಎಂದಿದ್ದಳಂತೆ!

ಅಮೆರಿಕಾದಲ್ಲಿ ಆದಾಗಲೇ ಬೇಬ್‌ರೂತ್ ಬೇಸ್ ಬಾಲ್ ಆಟಗಾರ್ತಿಯಾಗಿ 'ಹೋಮ್‌ರನ್' ರಾಣಿಯೆಂದೇ ಖ್ಯಾತಿ ಪಡೆದಿದ್ದಳು. ಬೇಬ್‌ರೂತ್ ತನ್ನ ಹದಿನೈದು ವರ್ಷಗಳ ಬೇಸ್‌ಬಾಲ್ ಕ್ರೀಡಾ ಬದುಕಿನಲ್ಲಿ ಐವತ್ತಕ್ಕೂ ಹೆಚ್ಚಿನ ದಾಖಲೆಗಳನ್ನು ಸ್ಥಾಪಿಸಿ ಬದುಕಿದ್ದಾಗಲೇ ದಂತಕತೆಯಾದವಳು. ಮಿಲ್ಡ್ರೆಡ್ ತನ್ನ ವೈವಿಧ್ಯಮಯ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದಾಗ ಬೇಬ್‌ರೂತ್ ಖ್ಯಾತಿಯ ಉತ್ತುಂಗದಲ್ಲಿದ್ದಳು. ಕ್ರೀಡಾ ಪ್ರಿಯರು ಮತ್ತೊಬ್ಬ ಬೇಬ್‌ರೂತ್ ಅರಳುತ್ತಿರುವುದನ್ನು ಮಿಲ್ಡ್ರೆಡ್‌ನಲ್ಲಿ ಕಂಡುಕೊಂಡು ಆಕೆಯನ್ನೂ ಮುದ್ದಿನಿಂದ ಬೇಬ್ ಎಂದೇ ಕರೆಯತೊಡಗಿದರು. ಮುಂದೆ ಆಕೆ ಬೇಬ್ ಡೈಡ್ರಿಕ್ಸನ್ ಎಂದೇ ಖ್ಯಾತಳಾದಳು.

1932ರ ಒಲಿಂಪಿಕ್ಸ್ ಕೂಟಕ್ಕೆ ಬರುವ ಮುನ್ನವೇ ಬೇಬ್

ಪ್ರತಿಭಾವಂತ ಆಟಗಾರ್ತಿಯಾಗಿ ಮೆರೆದಿದ್ದಳು. ಅವಳ ಸಾಧನೆಯಂತೂ ಅಪೂರ್ವ. 1932ರ ಜುಲೈನಲ್ಲಿ ಅಮೆರಿಕಾದಲ್ಲಿ ನಡೆದ ರಾಷ್ಟ್ರೀಯ ಮಹಿಳಾ ಚಾಂಪಿಯನ್‌ಷಿಪ್‌ನಲ್ಲಿ ಮಾಡಿದಳು. ಅದರಲ್ಲೂ ಇಲಿನಾಯಿಸ್ ತಂಡದಲ್ಲಿದ್ದ 22 ಕ್ರೀಡಾಪಟುಗಳು ಪ್ರತಿಯೊಂದು ವಿಭಾಗದ ಸ್ಪರ್ಧೆಯಲ್ಲಿ ಅಪ್ರತಿಮರೆನಿಸಿ ಕೊಂಡಿದ್ದರು. ಅಮೆರಿಕಾದ ಎಂಪ್ಲಾಯಿಸ್ ಕ್ಯಾಷುಯಲ್ಟೀಸ್ ವಿಮಾ ಸಂಸ್ಥೆಯ ಏಕೈಕ ಪ್ರತಿನಿಧಿಯಾಗಿ ಬೇಬ್ ಅವರೆಲ್ಲವನ್ನೂ ಮಣಿಸಿದಳು. ಇಂಥದೊಂದು ಸಾಧನೆ ಪ್ರಪಂಚದಲ್ಲಿ ಮತ್ತೆಲ್ಲೂ ಸಂಭವಿಸಿಲ್ಲ. ಪ್ರಯತ್ನಿಸಿದರೆ ಯಾವುದೇ ಸ್ಪರ್ಧೆಯನ್ನು ಗೆಲ್ಲಬಲ್ಲೆ ಎಂದು ಹೇಳುತ್ತಿದ್ದ ಬೇಬ್ ಮೊಟ್ಟಮೊದಲ ಯಂತ್ರ ಮಹಿಳೆಯೆನಿಸಿಕೊಂಡಳು.

ಷೇರು ಮಾರುಕಟ್ಟೆ ಪತನದಿಂದ ಅಮೆರಿಕ ತತ್ತರಿಸುವುದನ್ನಾಗಲೀ, ಒಲಿಂಪಿಕ್ಸ್‌ಗಿರುವ ಮಹತ್ವವನ್ನಾಗಲೀ ಅರಿಯದ ಬೇಬ್ ಡೈಡ್ರಿಕ್ಸನ್ ಲಾಸ್ ಏಂಜಲಿಸ್ ಕ್ರೀಡಾಂಗಣಕ್ಕೆ ಆಗಮಿಸಿದ ಕೂಡಲೇ "ನನ್ನ ಎಲ್ಲ ಎದುರಾಳಿಗಳನ್ನೂ ನಾನು ಸೋಲಿಸಲು ಬಂದಿದ್ದೇನೆ. ಹೌದು. ನಾನು ಯಾವ ಸ್ಪರ್ಧೆಯಲ್ಲಿ ಬೇಕಾದರೂ ಭಾಗವಹಿಸಬಲ್ಲೆ" ಎಂದು ಪತ್ರಕರ್ತರೆದುರು ಅತುಲ ವಿಶ್ವಾಸದಿಂದ ಹೇಳಿದಳು.

ಆದರೆ ಒಲಿಂಪಿಕ್ಸ್ ಆಗಿನ್ನೂ ಮಹಿಳೆಯರಿಗಾಗಿ ಸಂಪೂರ್ಣ ವೇದಿಕೆಯನ್ನು ಸಿದ್ಧಪಡಿಸಿರಲಿಲ್ಲ. ಒಲಿಂಪಿಕ್ ಆಂದೋಲನವನ್ನು ಪುನರಾರಂಭಿಸಿದ ಕೂಬರ್ತಿಯೂ ಆಟದ ಜಗತ್ತಿನಲ್ಲಿ ಮಹಿಳೆಯರ ಪಾತ್ರ ಹಾಗೂ ಅವರ ಸ್ಥಾನಮಾನದ ಬಗ್ಗೆ ಚಿಂತಿಸಿರಲಿಲ್ಲ. ಮಹಿಳೆಯರು ಎಲ್ಲ ಸ್ಪರ್ಧೆಗಳಲ್ಲಿ ಭಾಗವಹಿಸುವ ಬಗ್ಗೆ ಆತನಿಗೇನೂ ಒಲವಿರಲಿಲ್ಲ. ಅಂತರರಾಷ್ಟ್ರೀಯ ಹವ್ಯಾಸಿ ಅಥ್ಲೆಟಿಕ್ ಒಕ್ಕೂಟದ ಭಾವನೆಯೂ ಮಹಿಳೆಯರ ಬಗ್ಗೆ ಪ್ರೋತ್ಸಾಹದಾಯಕವಾಗಿರಲಿಲ್ಲ. ದೊಡ್ಡ ಸ್ಪರ್ಧೆಗಳಲ್ಲಿ ಮಹಿಳೆಯರು ಭಾಗವಹಿಸುವುದಕ್ಕೆ ಇನ್ನೂ ಸಿದ್ಧರಿಲ್ಲ ಎಂದು ಪರಿಗಣಿಸಿದ್ದ ಸಮಿತಿ ಕೇವಲ ಮೂರು ಸ್ಪರ್ಧೆಗಳಲ್ಲಿ ಮಾತ್ರ ಮಹಿಳೆಯರಿಗೆ ಅವಕಾಶ ಮಾಡಿಕೊಟ್ಟಿತು. ಜಾವೆಲಿನ್ ಎಸೆತ, 80ಮೀ ಹರ್ಡಲ್ಸ್ (ಈಗ ತೆಗೆದುಹಾಕಲಾಗಿದೆ) ಮತ್ತು ಹೈಜಂಪ್ ಸ್ಪರ್ಧೆಗಳಲ್ಲಿ ಬೇಬ್ ಈಗಾಗಲೇ ವಿಶ್ವದಾಖಲೆ ಸ್ಥಾಪಿಸಿದ್ದಳು. ಈಗ ಜಾವೆಲಿನ್ ಎಸೆತ ಮತ್ತು ಹರ್ಡಲ್ಸ್‌ನಲ್ಲಿ ಚಿನ್ನದ ಪದಕ ನೀಡಲಾಯಿತು. ಆದರೂ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಬೇಬೇ ಅಪ್ರತಿಮ ಆಟಗಾರ್ತಿಯೆಂಬುದನ್ನು ಪ್ರಸ್ತುತಪಡಿಸಿದಳು.

1936ರ ಬರ್ಲಿನ್ ಒಲಿಂಪಿಕ್ಸ್‌ನಲ್ಲಿ ಪದಕಗಳನ್ನು ಕೊಳ್ಳೆಹೊಡೆಯುವ ಸಾಮರ್ಥ್ಯವಿದ್ದರೂ ಬೇಬ್‌ಗೆ ಪಾಲ್ಗೊಳ್ಳುವ ಅವಕಾಶ ಸಿಕ್ಕಲಿಲ್ಲ. ಒಲಿಂಪಿಕ್ಸ್‌ನ ಹವ್ಯಾಸಿ ನೀತಿ, ನಿಯಮಗಳು ಬೇಬ್ ಪಾಲಿಗೆ ಶಾಶ್ವತವಾಗಿ ಬಾಗಿಲು ಮುಚ್ಚಿದವು. ಯಾವುದೋ ಆಟೋಮೊಬೈಲ್ ಪ್ರಚಾರಕ್ಕೆ ಹೆಸರು ನೀಡಿ ಹಣ ಗಳಿಸಿದಳು ಎಂಬ ಕಾರಣಕ್ಕೆ ಅವಳು ಆಯ್ಕೆಯಾಗಲಿಲ್ಲ. ಇದರಿಂದ ವಿಚಲಿತಳಾಗದೆ ಬೇಬ್ ಹೊಟ್ಟೆಪಾಡಿಗಾಗಿ ವಾಡೆವಿಲಿ ನಾಟಕಗಳಲ್ಲಿ ದೊಂಬರಾಟ ಮಾಡುತ್ತಾ, ಹಾರ್ಮೋನಿಕಾ ನುಡಿಸುತ್ತಾ, ಜೋಕ್‌ಗಳನ್ನು ಸಿಡಿಸುತ್ತಾ ಬದುಕು ದೂಡಿದಳು. ಕೆಲಕಾಲ ಟೈಪಿಸ್ಟ್ ಆಗಿಯೂ ಕೆಲಸ ಮಾಡಿದಳು. ಆಕೆ ಕ್ಯಾನ್ಸರ್‌ನಿಂದ 1956ರಲ್ಲಿ ಮಡಿದಾಗ ಕೇವಲ 42 ವರ್ಷ ವಯಸ್ಸು. ಜಗತ್ತಿನ ಮೂಲೆ ಮೂಲೆಗಳಲ್ಲಿ ಅವಳ ಸಾವಿಗಾಗಿ ಕ್ರೀಡಾಪ್ರಿಯರು ಕಣ್ಣೀರು ಮಿಡಿದರು. ಆಕೆಯನ್ನು ಪ್ರಖ್ಯಾತ ಕ್ರೀಡಾಪಟು ಜಿಮ್ ಥೋರ್ಪೆಗೆ ಹೋಲಿಸುತ್ತಾರೆ. ಇಬ್ಬರೂ ಅಸಾಮಾನ್ಯ ಕ್ರೀಡಾಪಟುಗಳು. ಆದರೆ ಅವರು ಸರಿಯಾದ ಕಾಲದಲ್ಲಿ ಹುಟ್ಟಲಿಲ್ಲ. ಇಬ್ಬರೂ ಮಾಡಿದ ಸಣ್ಣ ತಪ್ಪಿಗೆ ಶಿಕ್ಷೆ ಅನುಭವಿಸಿದರು. ಡೈಡ್ರಿಕ್ಸನ್ ಆಡದ ಆಟವಿಲ್ಲ. ಅಥ್ಲೆಟಿಕ್ಸ್‌ನಲ್ಲಿ ರಾಜ್ಯಮಟ್ಟದ, ರಾಷ್ಟ್ರೀಯ ಮಟ್ಟದ, ಒಲಿಂಪಿಕ್ಸ್ ಕೂಟದ ದಾಖಲೆ ಸ್ಥಾಪಿಸಿದವಳು. ಎಲ್ಲಾ ಬಗೆಯ ಗಾಲ್ಫ್ ಚಾಂಪಿಯನ್‌ಷಿಪ್ ಗೆದ್ದವಳು. ತನ್ನ ದೈತ್ಯ ಪ್ರತಿಭೆಯನ್ನು ಪ್ರಜ್ವಲವಾಗಿ ಉರಿಸಿ ಬಹುಬೇಗನೆ ಬದುಕಿಗೆ ವಿದಾಯ ಹೇಳಿದವಳು. ಮತ್ತೊಬ್ಬ ಬೇಬ್ ಹುಟ್ಟಿಬರುವುದು ಎಂದೋ!

ಕೃಪೆ : 'ಭುವನದ ಬೆಡಗು'

ಕೆ. ಪುಟ್ಟಸ್ವಾಮಿ

ಮಾನಸ ಬಳಗದ ಸದಸ್ಯರು ಪ್ರತಿ 2ನೇ ಶನಿವಾರದಂದು ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದ ಬಳಿ ಸಮಯ ಸಂಜೆ 4 ರಿಂದ 6 ಗಂಟೆಗಳವರೆಗೂ ಸಭೆ ಸೇರುತ್ತೇವೆ. ಮಾನಸ ಬಳಗದ ಸದಸ್ಯರನ್ನು ಸಂಪರ್ಕಿಸಲು ಇಚ್ಛಿಸುವವರು ಇಲ್ಲಿ ಭೇಟಿಯಾಗಬಹುದು.

-ಸಂಪಾದಕೀಯ ಮಂಡಳಿ

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 50 ರೂ.

ಸಂಸ್ಥೆಗಳಿಗೆ : 100 ರೂ.

ಸಂ. ಮಂಡಳಿ

REGD No. CPMG/KA/BGE/289/2001

BOOK -POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067